ಅಪರಂಜಿ

ಆಗಸ್ಟ್ 99

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವು

ಸಿ.ಆರ್. ಸತ್ಯ

ಸುಜಾತ ರಾಜಣ್ಣ

ಎಂ.ಎಸ್.ಕೆ

ನೀರಗುಂದ ಕೇಶವಮೂರ್ತಿರಾವ್

ಶೀನೂ

ಕೃಷ್ಣ ಸುಬ್ಬರಾವ್

ರಾಶಿ

ಬಿ.ಎಸ್. ಪ್ರಭಾಕರ್

ಲೀಲಾಶೇಖರ್

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷಣ್ ಬರೆದ ವ್ಯಂಗ ಚಿತ್ರ

ಶುಭಾಶಯಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯಿ

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 ಆಗಸ್ಟ್- 99 ಸಂಚಿಕೆ- 11

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 16 ಆಗಸ್ಟ್ - 99 ಸಂಚಿಕೆ - 11

ಸ್ತುತಿ ನಿಂದೆಗಳನ್ನು ಸಮವಾಗಿ ಬಗೆದು ಮೌನವನ್ನು ಧರಿಸಿ ಸಿಕ್ಕಷ್ಟರಿಂದಲೇ ಸಂತುಷ್ಟನಾಗಿ, ಮನೆಯಿಲ್ಲದವನಾಗಿ, ಸ್ಥಿರಮತಿಯಾದವನು ನನಗೆ ಮಹಾ ಪ್ರಿಯಭಕ್ತನು.

- ಗೀತಾ

ಅಪರಂಜಿ ಅನಿಕೇತನ (ಮನೆಯಿಲ್ಲದವಳು) ಳಾದುದರಿಂದಲೂ, ಯಾರು ಬೈದರೂ ಹೊಗಳಿದರೂ ಸುಮ್ಮನೆ ಇರುವುದರಿಂದಲೂ ಶ್ರೀಕೃಷ್ಣನಿಗೆ ಬಹು ಪ್ರಿಯಳಾದ ಭಕ್ತೆ. ಎಲ್ಲರೂ ಅವಳಂತಿರುವುದಿಲ್ಲ.

ದಶಕಗಳ ಗಟ್ಟಲೆ ರಾಜ್ಯವನ್ನಾಳಿ, ಭಾರತದ ಅನೇಕ ಭಾಗವನ್ನು ಪರರಿಗೆ ಬಿಟ್ಟು, ನಮ್ಮ ಸೈನಿಕರು ಗೆದ್ದ ನೆಲವನ್ನು ಅನ್ಯರಿಗೆ ಬಿಟ್ಟು ತಾವು ಭವನಗಳನ್ನು ಡಜನ್ ಗಟ್ಟಲೆ ಕಟ್ಟಿಕೊಂಡು, ಮೊದಲ ಚುನಾವಣೆಯಲ್ಲೇ ಜಾತಿಯ ಅಸ್ತ್ರವನ್ನು ಬಳಸಿ, ಶತ್ರುಗಳಿಗೆ ಅಭಯವನ್ನು, ಅಮಾಯಕ ಪ್ರಜೆಗಳಿಗೆ ಭೀತಿಯನ್ನು ಹಬ್ಬಿಸಿ, ಮೂಲೆ ಗುಂಪಾದರೂ, ಸ್ಥಿರತೆಯ ಒಡಕು ತಮಟೆ ಬಾರಿಸುವವರನ್ನು ಕಂಡು ಅಪರಂಜಿಗೆ ಪಿತ್ತ ಕೆರಳಿದರೂ, ಅಸಹಾಯಕತೆಯಿಂದ ಬೆಪ್ಪುನಗೆ ಬೀರದೆ ಮಾರ್ಗವೇನಿದೆ?

ತುಪ್ಪದಂತಹ ಮಾತನಾಡಿದರೂ, ಕೆಲವರನ್ನು ನಂಬಬಾರದಂತೆ. ಜಾತಿಯ ಬಂಡವಾಳದಿಂದ ಮೆರೆಯುವ ಶಕಾರ ಸಂತತಿ (ಕೌರ್ಯ+ಕ್ಷುದ್ರಬುದ್ಧಿ+ಮತಿಗೇಡಿತನ) ಎಲ್ಲೆಲ್ಲೂ ಬೋಲ ಬೋಲಮಾಡಿ, ನಾವು ರಾಷ್ಟ್ರ ನಾಯಕರು, ದೇಶಕ್ಕೆ ನಾವೇ ಗತಿ ಎಂದರೆ ತಲೆಯಿರುವವರಾರೂ ನಂಬುವುದಿಲ್ಲ. ಆದರೆ ಪ್ರಜಾಪ್ರಭುತ್ವ ಬಹುಮತದ್ದು. ದೇಶಕ್ಕೇನು ಗತಿ?

ದೇಶವನ್ನು ಸರಿಯಾಗಿ ನಡೆಸುತ್ತಿರುವವರಿಗೆ ಬಲ ದೊರಕಲಿ ಎಂದು ಅಪರಂಜಿ ಪ್ರಾರ್ಥಿಸುತ್ತಿದ್ದಾಳೆ. ನಕ್ಕರೂ ಅಷ್ಟೇ ಬಿಟ್ಟರೂ ಅಷ್ಟೇ.



○ ಪ್ರಕಾಶ್

ನಗರದಲ್ಲಿ ಅಪಘಾತಗಳ ಸಂಖ್ಯೆ ಇಳಿಮುಖ.
- ಸುದ್ದಿ

ಆಮೆ ವೇಗದ ವಾಹನಗಳ ದೆಸೆಯಿಂದ!!

★★★

ನ್ಯಾಯಕ್ಕೆ ಧರ್ಮದ ತಳಹದಿ ಇರಲಿ - ನ್ಯಾಯಮೂರ್ತಿ ಸಲಹೆ
- ಪತ್ರಿಕೆ

ನ್ಯಾಯವಾದ ಮಾತು!!

★★★

ರಾಜ್ಯದಲ್ಲಿ 313 ಸ್ಥಳಗಳಲ್ಲಿ ಗುಪ್ತನಿಧಿ ಪತ್ತೆ
- ಸುದ್ದಿ

ಮತ್ತೆ 'ಗುಪ್ತ' ಹೇಗಾಯಿತು?

★★★

ಪಟೇಲ್, ಜಾರ್ಜ್ ರಹಸ್ಯ ಚರ್ಚೆ
- ಸುದ್ದಿ

ಜಾರ್ಜ್ ಅವರು ಉತ್ತರಕ್ಕೆ ಗಮನ ಕೊಡಲಿ!!

★★★

ಕ್ರಿಕೆಟ್ ಆಟಗಾರರನ್ನು ಮಾಧ್ಯಮದಿಂದ ದೂರವಿಡಲು ಕ್ರಮ.
- ಸುದ್ದಿ

ಅವರ ಕಳಪೆ ಆಟ ನೋಡಿದರೆ, ಅದೇ ಕ್ಷೇಮ.

★★★

ದೇವಸ್ಥಾನ ದೋಚಿದ ಡಕಾಯಿತರ ಪತ್ತೆಗೆ ವಿಶೇಷ ತಂಡ.
- ಸುದ್ದಿ

ದೈವೇಚ್ಛೆ!!

★★★

ಭಿನ್ನರನ್ನು ಹೊರದಬ್ಬಲು ದಳ ತೀರ್ಮಾನ
- ಪತ್ರಿಕೆ


ಅವರಿಗೆಲ್ಲ ಬೇಕಾದಷ್ಟು ಬಾಗಿಲುಗಳು ಕಾದಿವೆ!!

★★★

ಸೋನಿಯಾಗೆ ಸಂವಿಧಾನ ಪ್ರತಿ ನೀಡಿದ ಎಸ್ಸೆನ್
-ಸುದ್ದಿ

ಅತ್ಯಗತ್ಯವಾದ ಕೊಡುಗೆ!!

★★★



''ಹೆರಳಿಗೆ ಕಮಲದ ಹೂ ಮುಡ್ಕೊಂಡು ನಮ್ಮನೇ
ಮುಂದೇನೇ ಹಾದು ಹೋಗ್ತಾಳಲ್ಲಾ ಆ ಚಿನಾಲಿ!''

ನಮ್ಮ ನಮ್ಮಲ್ಲಿ

ಕಳೆದ ತಿಂಗಳು ನಮ್ಮಕ್ಕನ ಮಗ ಮುನ್ನ (ಶ್ರೀಧರ) ಅಮೆರಿಕೆಯಿಂದ ಬೆಂಗಳೂರಿಗೆ ಬಂದಿದ್ದ. ಅವನ ತಂಗಿ ಪದ್ಮಜ ಕೂಡ ಅದೇ ಸಮಯಕ್ಕೆ ಬೆಂಗಳೂರಿಗೆ ಬಂದಿದ್ದಳು. ಅವಳೂ ಸಹಾ ಅಮೆರಿಕೆಯಲ್ಲಿನ ಎನ್ನಾರೈ. ಊರಿಗೆ ಹಿಂತಿರುಗುವ ಮೊದಲು ಇಬ್ಬರೂ ನನ್ನನ್ನು ನಮ್ಮ ಕ್ಲಬ್ಬಿನಲ್ಲಿ ಭೇಟಿ ಮಾಡಿದ್ದರು. ಕುಶಲ ಪ್ರಶ್ನೆಗಳಾದ ಮೇಲೆ ಮುನ್ನ ''ಅಪರಂಜಿ ಹೇಗೆ ನಡೀತಿದೆ? ಬರಹಗಾರರ ಬಳಗ ಸಾಕಷ್ಟಿದೆಯೇ?'' ಎಂದೆಲ್ಲಾ ವಿಚಾರಿಸಿದ.

''ಹದಿನೈದು ವರುಷ ಮುಗಿದು ಹದಿನಾರಕ್ಕೆ ಕಾಲಿಟ್ಟಿದ್ದಾಳೆ ಅಪರಂಜಿ. ತಕ್ಕಮಟ್ಟಿಗೆ ಆರೋಗ್ಯವಾಗಿಯೇ ಇದ್ದಾಳೆ. ಅದಿರಲಿ, ನಿಮ್ಮ ಊರಿನ ಸಮಾಚಾರ ಹೇಗೆ? ಅಲ್ಲಿನ ಜನಗಳ ನಗು ಮನೋಭಾವ ಎಂತಹದು? ನನಗೆ ತಿಳಿದಿರುವ ನ್ಯೂಯಾರ್ಕರ್, ಮ್ಯಾಡ್ ಮ್ಯಾಗಝೀನ್ ಇವುಗಳನ್ನು ಬಿಟ್ಟು ಬೇರೇ ನಗೆ ಮಾಸಿಕಗಳಿವೇ?'' ಎಂದು ನನ್ನ ಪ್ರಶ್ನೆಗಳನ್ನ ಮೆಷಿನ್ ಗನ್ನಿಸಿದೆ. ''ಅಮೆರಿಕಾದ ಜನರ ಹಾಸ್ಯಪ್ರಜ್ಞೆ ನಿಜಕ್ಕೂ ಕಚಗುಳಿ ಇಡುವಂತಹುದು. ಟಿ.ವಿ. ಟಾಕ್ ಷೋ ಗಳಲ್ಲೇ ಆಗಲಿ, ಪತ್ರಿಕೆಗಳಲ್ಲೇ ಆಗಲಿ ಸದಾ ನವಿರಾದ ಹಾಸ್ಯದ ಹೊಳೇನೇ ಹರೀತಿರುತ್ತೆ. ಅಷ್ಟೇ ಅಲ್ಲ. ಇಂಟರ್ನೆಟ್‌ನಲ್ಲೂ ಅನೇಕ ವೆಬ್ ಸೈಟ್‌ಗಳು ಈ ನಗೆಗಾರಿಕೆಗೇ ಮೀಸಲಾಗಿವೆ. ಅಂದಹಾಗೆ, ನೀನು ಅಪರಂಜಿನ ವೆಬ್‌ನಲ್ಲಿ ಏಕೆ ಹಾಕಬಾರದು?'' ಎಂದು ನನಗೆ ಮರು ಪ್ರಶ್ನೆ ಹಾಕಿದ, ಶ್ರೀಧರ.

''ಇಂಟರ್ನೆಟ್ನಲ್ಲಿ ಅಪರಂಜಿ ಹಾಕೋ ಉದ್ದೇಶ ಖಂಡಿತ ಇದೆ. it is a matter of time ಅಷ್ಟೇ ಈ ಬಾರಿ ನಮ್ಮ ಅಪರಂಜಿ ಓದುಗರಿಗೆ ರುಚಿ ತೋರಿಸೋಕ್ಕೆ ಅಮೆರಿಕನ ಹ್ಯೂಮರ್‌ನ ಸ್ಯಾಂಪಲ್ ಕೊಡಿ ನೋಡೋಣ. ಹೇಗಿದ್ರೂ ಇಬ್ಬರು ಎನ್ನಾರೈಗಳಿದ್ದೀರ.''

ನನ್ನ ಛಾಲೆಂಜನ್ನ ಮೊದಲು ಸ್ವೀಕರಿಸಿದವಳು ಪದ್ಮಜಾ. ''ಕುಮಾರ್, ತಕ್ಷಣಕ್ಕೆ ನೆನಪಿಗೆ ಬರೋದು ಅಂದ್ರೆ ಬ್ಲಾಂಡೀ ಜೋಕ್ಸ್. ನಮ್ಮಲ್ಲಿ ಹಿಂದೆ ಗಾಂಪರ ಜೋಕ್ಸ್, ಈಗ ಸರ್ದಾರ್ಜಿ ಜೋಕ್ಸ್ ಇರೋಹಾಗೆ ಅಮೆರಿಕಾದಲ್ಲಿ ಈ ಬ್ಲಾಂಡೀ ಜೋಕ್ಸ್ ಜನಪ್ರಿಯತೆ ಗಳಿಸಿವೆ...'' ಅಂತ ಪದ್ಮಜಾ ಹೇಳುತ್ತಿರುವಾಗಲೇ ಮುನ್ನ ಮಧ್ಯೆ ಬಾಯಿಹಾಕಿ, ''ಕುಮಾರ್‌ಗೆ ಬ್ಲಾಂಡೀ ಜೋಕ್ಸ್ ಹೇಳುಕ್ಕೆ ಮುಂಚೆ ಬ್ಲಾಂಡೀ ಬಗ್ಗೆ ಸ್ವಲ್ಪ ಬ್ಯಾಕ್ ಗ್ರೌಂಡ್ ಕೊಡಬೇಕು ಕಣೇ ಇಲ್ದಿದ್ರೆ ಕೆಲವು ಅರ್ಥಾನೇ ಆಗೋದಿಲ್ಲ. ಕುಮಾರ್, ಬ್ಲಾಂಡೀ ಅಂದ್ರೆ ಹೊನ್ನಿನ ಬಣ್ಣದ ಕೂದಲಿರೋ ತರುಣಿ ಅಂತ. ಅಮೆರಿಕಾದಲ್ಲಿ ಹೊನ್ನಿನ ಬಣ್ಣದ ಕೂದಲಿದ್ರೆ ಅವರು ಅತಿ ರೂಪಸಿಯರು ಅಂತ ಭಾವನೆ. ಈ ತರುಣೀರಿಗೆ ಬುದ್ಧಿ ಸ್ವಲ್ಪ ಮಂದ. ನಿಜವಾಗ್ಲೂ ಹಾಗಲ್ಲ. ಅವರನ್ನ ಹಾಸ್ಯ

ಮಾಡುಕ್ಕೋಸ್ಕರ ಹಾಗೆ ಹೇಳ್ತಾರೆ ಅಷ್ಟೇ. ಅಲ್ಲದೇ ಈ ತರುಣೀರು ಸ್ವಲ್ಪ ಸ್ವೇಚ್ಛಾಚಾರಿಣಿಯರು ಬೇರೇ....''

''ಬ್ಯಾಕ್ ಗ್ರೌಂಡ್ ಸಾಕುಕಣೋ ಮುನ್ನ, ಈಗ ಒಂದು ಪ್ರಶ್ನೆ. ಒಬ್ಬ ಬ್ಲಾಂಡೀ ಶುಕ್ರವಾರ ನಗೋಹಾಗೆ ಮಾಡಬೇಕಾದರೆ ಏನು ಮಾಡಬೇಕು?''

ಪದ್ಮಜಳ ಪ್ರಶ್ನೆಗೆ ನನ್ನಲ್ಲಿ ಉತ್ತರ ಇರಲಿಲ್ಲ.

ಶ್ರೀಧರ ''ಅವಳಿಗೆ ಸೋಮವಾರ ಒಂದು ಜೋಕ್ ಹೇಳಬೇಕು.'' ಅಂತ ಹೇಳಿ ನಕ್ಕ. ಈಗ ಶ್ರೀಧರನ ಸರದಿ. ''ಒಬ್ಬ ಬ್ಲಾಂಡೀ ಮತ್ತು ಒಬ್ಬ ಬ್ರುನೆಟ್-ಬ್ರುನೆಟ್ ಅಂದ್ರೆ ಕಪ್ಪು ಕೂದಲಿನ ಹುಡುಗಿ - ಇವರಿಬ್ಬರೂ ಒಂದು ಹಾರಾಡ್ತಿರೋ ಪ್ಲೇನಿನಿಂದ ಬಿದ್ದರೆ ಯಾರು ಮೊದಲು ಭೂಮಿಗೆ ಬೀಳ್ತಾರೆ?''

ಅರೆ, ಗೆಲಿಲಿಯೋ ಕಾಲದಲ್ಲೇ ಇದು ಉತ್ತರಿಸಲ್ಪಟ್ಟಿತ್ತಲ್ಲಾ. ಇಬ್ಬರೂ ಒಟ್ಟಿಗೆ ಅಲ್ವೇ ಬೀಳೋದು ಅಂದ್ಕೋತಿರೋವಾಗ್ಲೇ ಪದ್ಮಜ ''ಬ್ರುನೆಟ್ ಮೊದಲು ಭೂಮಿ ಮುಟ್ತಾಳೆ. ಬ್ಲಾಂಡೀ ಹೇಗಿದ್ರೂ, ನಿಂತು, ನಿಂತು ದಾರಿ ಕೇಳ್ಕೊಂಡು ಇಳೀಬೇಕಲ್ಲಾ'' ಅರೆ, ಪರವಾಗಿಲ್ವೇ, ಅಣ್ಣ, ತಂಗಿ ಚಾಲೂಕಾಗಿದಾರೆ ಅಂದ್ಕೊಂಡೆ, ಅನಂತರ ಪಟಾಕಿ ಸರ ಸಿಡಿದ ಹಾಗೆ ಕಿಡಿಗಳು ಹಾರಿದವು.

''ಒಬ್ಬ ಬ್ಲಾಂಡೀಯ ಕಣ್ಣು ಹೊಳೆಯೋ ಹಾಗೆ ಮಾಡಬೇಕಾದರೆ ಏನು ಮಾಡಬೇಕು ಗೊತ್ತಾ. ಬಹು ಸುಲಭ. ಅವಳ ಕಿವೀಲಿ ಟಾರ್ಚ್ ಬಿಟ್ಟರೆ ಆಯ್ತು.''

''ಬ್ಲಾಂಡೀ ಗಾಜಿನ ಗೋಡೇನ ಏಕೆ ಹತ್ತಿದಳು ಗೊತ್ತಾ. ಗೋಡೆ ಆಚೆ ಬದಿ ಏನಿದೆ ಅಂತ ನೋಡುಕ್ಕೆ.''

''ಒಬ್ಬ ಬುದ್ಧಿವಂತೆ ಬ್ಲಾಂಡೀ ಮತ್ತು ಹಾರಾಡುವ ತಟ್ಟೆ ಇವೆರಡರ ನಡುವೆ ಸಾಮ್ಯ ಏನು ಅಂದ್ರೆ ಜನ ಎರಡರ ಬಗ್ಗೇನೂ ಮಾತಾಡ್ತಾರೆ. ಆದರೆ ಯಾರೂ ಅವುಗಳನ್ನ ಕಣ್ಣಾರೆ ನೋಡಿಲ್ಲ.''

''ಒಬ್ಬ ಬ್ಲಾಂಡೀ ಒಂದು ಪಿಜ್ಜಾ ಕಾರ್ನರ್‌ಗೆ ಹೋಗ್ತಾಳಂತೆ. ಅಲ್ಲಿ ಅವಳು ಒಂದು ಪಿಜ್ಜಾ ಆರಿಸಿದ ಮೇಲೆ, ಅಂಗಡಿಯವ ''ಮೇಡಂ, ಈ ಪಿಜ್ಜಾನ ಆರುಭಾಗ ಕತ್ತರಿಸಿ ಪ್ಯಾಕ್ ಮಾಡಲೋ ಅಥವಾ ಹನ್ನೆರಡು ಪೀಸ್ ಮಾಡಬೇಕೋ'' ಅಂತ ಕೇಳಿದ್ದಕ್ಕೆ, ಆ ಬ್ಲಾಂಡೀ ''ಆರೇ ಪೀಸ್ ಸಾಕಪ್ಪಾ. ಹನ್ನೆರಡು ಪೀಸ್ ತಿನ್ನುಕ್ಕೆ ಯಾರ ಕೈಲಿ ಆಗುತ್ತೆ'' ಅಂದಳಂತೆ.'' ನಿಜಕ್ಕೂ ಆ ಮಕ್ಕಳ ಮಾತುಕತೆ ಚೆನ್ನಾಗಿತ್ತು. ನನ್ನ ಅಕ್ಕನ ಮಕ್ಕಳು ಎಂಬ ಮಮತೆಯಿಂದ ಹಾಗೆನ್ನಿಸಿತೋ, ಅಥವಾ ವಾಸ್ತವವಾಗಿ ಅವು ಒಳ್ಳೆಯ ಹಾಸ್ಯವೋ ಓದುಗರೇ ನಿರ್ಧರಿಸಬೇಕು.

ಬಹುದಿನಗಳ ನಂತರ ಶ್ರೀಮತಿ ಸುಜಾತಾ ಅಪರಂಜಿಗೆ ಒಂದು ಲೇಖನ ನೀಡಿದ್ದಾರೆ. ನನ್ನ ಅನಿಸಿಕೆಯಲ್ಲಿ ಈ ಬರಹದಲ್ಲಿ ಅನೇಕ ಉತ್ತಮ ಗುಣಗಳಿವೆ. ಉತ್ಪ್ರೇಕ್ಷೆಯಿಲ್ಲದ ವಾಸ್ತವಿಕತೆ. ಕುತೂಹಲ ಮೂಡಿಸಿ ನಂತರ ಅದನ್ನು ತಣಿಸುವ ರಚನಾ ಕೌಶಲ್ಯ, ನಮ್ಮ ಯುವ ಪೀಳಿಗೆಯಲ್ಲಿ ಭರವಸೆ ಮೂಡಿಸುವ ಬೆಚ್ಚಗಿನ ಘಟನೆ, ಇವೆಲ್ಲಾ ಅಂಶಗಳನ್ನು ಒಂದೇ ಲೇಖನದಲ್ಲಿ ಹೆಣೆದಿರುವ ಸುಜಾತಾರವರಿಗೆ ಅಪರಂಜಿಯ ಅಭಿನಂದನೆಗಳು. ಇಂತಹ ಲೇಖನಗಳು ನಮ್ಮ ಬರಹಗಾರ ಬಳಗಕ್ಕೆ ಮಾದರಿಯಾಗಬಲ್ಲವು ಅನಿಸುತ್ತದೆ ನನಗೆ.

– ಶಿವಕುಮಾರ್

ಜಿ.ವಿ. ಅತ್ರಿಯವರ ಸಾರಥ್ಯದಲ್ಲಿ
ಬಾಗೂರು ಮಾರ್ಕಾಂಡೇಯ ಇವರ ರಚನೆ ಕಲ್ಪನೆಯ
ಚಿತ್ರ ಕಾವ್ಯ ಗಾಯನದ

"ಭಾವ ಚೈತ್ರೋತ್ಸವ"

ಎಂಬ ವಿಶಿಷ್ಟ ಕಾರ್ಯಕ್ರಮ

ಬಾಗೂರು ರಚಿಸಿದ ಚಿತ್ರಕಾಕೃತಿಗಳ ಪ್ರದರ್ಶನ

ಆರು ಪುಸ್ತಕಗಳ ಬಿಡುಗಡೆ

1. ಚುಕು ಬುಕು ರೈಲು - (ಗೋರೂರು ಸಾಹಿತ್ಯ ಪ್ರಶಸ್ತಿ ಪಡೆದ ಕೃತಿ)
2. ಚಿನ್ನರ ಚಿಲಿಪಿಲಿ
3. ಬಣ್ಣದ ಅಂಗಿ
4. ಮಗು ಮತ್ತು ಚಲಿಸುವ ರೇಖೆ
5. ಕಾವ್ಯ ಕನ್ನಿಗೆ
6. ಭಾವೋನ್ಮಾಧಿನಿ

ಧ್ವನಿಸುರುಳಿಗಳ ಬಿಡುಗಡೆ

1. ಚುಕು ಬುಕು ರೈಲು 2. ಚೌಡೇಶ್ವರಿ ಭಕ್ತಿ ಗೀತೆಗಳು

ಕೃತಜ್ಞತೆ ಸಮರ್ಪಣೆ

ಗಣ್ಯರಿಗೆ ಸನ್ಮಾನ

"ಗೀತ ಗಾಯನ"

ಜಿ.ವಿ. ಅತ್ರಿ ಹಾಗೂ ಸಂಗಡಿಗರಿಂದ

ಸ್ಥಳ: ಚಿತ್ರಕಲಾ ಪರಿಷತ್
ಕುಮಾರಕೃಪ ರಸ್ತೆ, ಬೆಂಗಳೂರು.

ದಿನಾಂಕ: 25-8-1999
ಸಮಯ: ಸಂಜೆ 6ಕ್ಕೆ

ಸರ್ವರಿಗೂ ಸ್ವಾಗತ

ಪ್ರಕೃತಿಗೆ ತಲೆಬಾಗಿ...

– ಸಿ.ಆರ್. ಸತ್ಯ

ನಿಜವಾಗಿ ಹೇಳಬೇಕೂಂದ್ರೆ ಈ ಲೇಖನವನ್ನು ಗಂಡಸರು ಮಾತ್ರ ಓದಲಿ ಅಂತ ಬರೆದಿರೋದು, ಹೆಂಗಸರು ಓದಿದರೆ ಅಭ್ಯಂತರವೇನೂ ಇಲ್ಲ. ಆದರೆ ಅದರಿಂದ ಅವರಿಗೆ ಏನೂ ಉಪಯೋಗವಾಗಲ್ಲ ಅಂತ ನಾನು ಈಗಲೇ ಖಚಿತಪಡಿಸ್ತೀನಿ. ಈ ಲೇಖನ ಹೊರ ಹೊಮ್ಮಿರೋದು ನನ್ನ ಸ್ವಂತ ಅನುಭವಗಳಿಂದ. ಲೇಖನದ ಉದ್ದೇಶ ಇಷ್ಟೆ: ಈ ಅನುಭವಗಳನ್ನು ನನ್ನ ತರಹಾನೇ ಇರೋ ಸಹಗಂಡು ಪ್ಯಾದೆಗಳ ಜೊತೆಗೆ ಹಂಚಿಕೊಳ್ಳೋದು ಮತ್ತು ಅದರಿಂದಾಗಿ ಆ ಪ್ಯಾದೆಗಳು ಸ್ವಲ್ಪ ಮನಸ್ಸಿಗೆ ಶಾಂತಿ ತಂದುಕೊಂಡರೆ, ಅದರಿಂದಾಗಿ ನಾನು ಧನ್ಯ ಅಂತ ಅಂದುಕೊಳ್ಳೋದು.

1. ತಲೆ ಬೋಳು: ಸಾಮಾನ್ಯವಾಗಿ ಮನುಷ್ಯನು ಹುಟ್ಟುವಾಗ ಬೋಳು ತಲೆಯವರಾಗಿದ್ದು ನಂತರ ಕೇಶರಾಶಿ ಪಡೆದುಕೊಂಡು, ಮದುವೆ, ಮಕ್ಕಳು, ಬಾಸ್ ಗಲಾಟೆಯಿಂದಾಗಿ ಮತ್ತೆ ಬೋಳು ತಲೆಯವರಾಗ್ತಾರೆ. ನಾನು ಹುಟ್ಟಿದಾರಭ್ಯದಿಂದ ಬೋಳುತಲೇನೇ! ನೀವೂ ನನ್ನ ಹಾಗೇ ಇದ್ದರೆ ಯೋಚನೆ ಮಾಡ್ಕೊಂಡು ಕೂದಲಿಲ್ಲ ಕೂದಲಿಲ್ಲ ಅಂತ ಹಂಬಲಿಸಬೇಡಿ. ''ತಲೆ ಹೊರಗೆ ಕೂದಲಿರೋದು ಮುಖ್ಯ ಅಲ್ಲ ತಲೆ ಒಳಗೆ ಬುದ್ಧಿ ಇರೋದು ಮುಖ್ಯ!'' ಅನ್ನೋ ಗಹನವಾದ ವಾಕ್ಯಗಳನ್ನು ನಮ್ಮ ಅಯ್ಯಂಗಾರ್ ಮೇಷ್ಟು ಹೇಳ್ತಿದ್ದಿದ್ದು ನನಗೆ ಇನ್ನೂ ಜ್ಞಾಪಕ ಇದೆ. (of course, special ಆಗಿ ನನಗೆ ''ನಿನ್ನ ತಲೆಯ ಒಳಗೆ ಬುದ್ದೀನೂ ದೇವರು ಕೊಟ್ಟಿಲ್ಲ, ಅವನೇ ನಿನ್ನನ್ನ ಕಾಪಾಡಬೇಕು'' ಅಂತ ಹೇಳಿದ್ದು ಬೇರೆ ವಿಷಯ) ಹಾಗಂತ ನನಗೆ ಜೀವನದಲ್ಲೇನೂ ಆಘಾತವಾಗಿಲ್ಲ. ನನ್ನ ಈ ಐವತ್ತು and ಆಡ್ ವಯಸ್ಸಿನಲ್ಲಿ ಒಂದು ದಿನ ಹೇರ್‌ಕಟ್‌ಗೆ ಅಂತ ದುಡ್ಡು ತೆತ್ತಿಲ್ಲ. ಕೊಬ್ರಿಎಣ್ಣೆ, ಬ್ರಿಲ್‌ಕ್ರೀಮ್ ಅನ್ನೋ ಯೋಚನೇನೇ ಇಲ್ಲ. ನನ್ನ 'ಕ್ರಾಪು' ತೀಡ್ಕೊಳ್ಳಕ್ಕೆ ಅಂತ ನನಗೆ ಯಾವ ಕನ್ನಡೀನೂ ಬ್ಯಾಡ. ನನ್ನ ಕೈಲಿ ಬಾಚಣಗೇನೇ ಹಿಡಿದಿಲ್ಲ. ಆನ್ ದಿ ಕಾಂಟ್ರರಿ, ನನ್ನ ಬೋಳು ತಲೆ ಆಟದ ಮೈದಾನದ ಹಾಗೆ ನನ್ನ ಮಕ್ಕಳು, ಪಕ್ಕದ ಮನೆ ಮಕ್ಕಳು, ಹೆಂಡತಿ I mean ನನ್ನ ಹೆಂಡತಿ ಎಲ್ಲರಿಗೂ ಒಂದು ಆಟದ ಸಾಧನವಾಗಿದೆ, ಸಂತಸದ ನೋಟವಾಗಿದೆ, ಪೋಸ್ಟ್ ಡಿನ್ನರ್ ಜೋಕ್ ಆಗಿದೆ. ಆಗಲಿ ಬಿಡಿ ನನ್ನಿಂದ ನಾಲ್ಕು ಜನ ಸಂತೋಷ ಪಟ್ಕೊಳ್ಳಲಿ. ಮೊನ್ನೆ ನಮ್ಮ ಪಕ್ಕದ ಮನೆ ಹುಡುಗ ''ಅಂಕಲ್, ನಿಮ್ಮ ತಲೆ ಟ್ರಾಫಿಕ್ ಹಜ಼ಾರ್ಡ್!'' ಅಂದ. ಯಾಕೋ? ಅಂದೆ ''ರಾತ್ರಿ ಹೊತ್ತು ಹೆಡ್‌ಲೈಟ್

ತಗಲಿದರೆ ನಿಮ್ಮ ತಲೆ ಭಾರಿ ರಿಫ್ಲೆಕ್ಷನ್ ಕೊಡುತ್ತೆ. ಯಾವುದಾದರೂ ಕರಿ ಪೈಂಟ್ ಹೊಡ್ಕೊಳ್ಳಿ ತಲೇಮೇಲೆ'' ಅಂತ ವಿವರಿಸಿದ! ಈ ತರಹ ಕಿರುಬಾಣಗಳಿಗೆ ಹೆದರಿಕೊಂಡು ಜೀವನವನ್ನು ಹಾಳುಮಾಡಿಕೋಬೇಡಿ. ನಿಮ್ಮ ಬೋಳುತಲೇನ ಧೈರ್ಯವಾಗಿ ಎತ್ತಿಕೊಂಡು ಓಡಾಡಿ (ಮಳೆಗಾಲದಲ್ಲಿ ಹುಷಾರು ಅಷ್ಟೆ)

2. ದಪ್ಪ ಹೊಟ್ಟೆ: ಇದು ನನಗೆ (ಬೋಳುತಲೆ ತರಹ) ಹುಟ್ಟಿದಾರಭ್ಯ ಇರದಿದ್ದರೂ ಸುಮಾರು ಮೂವತ್ತು ವರ್ಷಗಳಲ್ಲಿ ನಾನು ಕಟ್ಟಿಕೊಂಡಿರುವ ಆಸ್ತಿಯಾಗಿದೆ. ನನ್ನ Personal archeological records ಪ್ರಕಾರ ಇಪ್ಪತ್ತನೇ ವಯಸ್ಸಿಗೆ ನನ್ನ ಹೊಟ್ಟೆ ಬನಶಂಕರಿ ಗುಡ್ಡದ ಹಾಗಿತ್ತು. next ಇಪ್ಪತ್ತು ವರುಷಗಳಲ್ಲಿ ನಂದಿಬೆಟ್ಟ - ಬಾಬಾಬುಡನ್‌ಗಿರಿ - ಉದಕಮಂಡಲ Swiss Alps ಹೀಗೆ evolution Scale ಮೇಲೆ ಬೆಳೀತಾ ಈಚೀಚೆಗೆ ಮೌಂಟ್ ಫ್ಯೂಜೀ ತರಹದ Shape ನಲ್ಲಿ ನಿಂತಿದೆ. ಎಲ್ಲರ ತರಹ ನಾನೂ ambition ಮನುಷ್ಯಾನೇ, ಕೈಲಾಸ ಪರ್ವತ ನನ್ನ final destination ಉ! ನನ್ನಂತೆ ನೀವುಗಳು ಇದರ ಬಗ್ಗೆ ನಾಚಿಕೆ ಪಟ್ಕೊಳ್ಳೋ ಅಗತ್ಯವಿಲ್ಲ. ಮನುಷ್ಯನ ಹೊಟ್ಟೆಯ ಆಕಾರ ಪ್ರಕೃತಿ ನಿಯಮಕ್ಕೆ ಬದ್ಧವಾದದ್ದು. ಅದರ ಪಾಡಿಗೆ ಅದನ್ನು ಬಿಟ್ಟು ನೀವು ಜೀವನದಲ್ಲಿ ಬೇರೆ ಯಾವುದಾದರೂ ಉಪಯೋಗವಾಗೋ ಅಂತಹ ಕಾರ್ಯಗಳ ಮೇಲೆ ಮನಸ್ಸಿಡಿ. (ಉದಾ: ದೇಶೋದ್ಧಾರ ಕಾರ್ಯ) ಹೊಟ್ಟೆಯನ್ನು ದೇವರು ಸೃಷ್ಟಿ ಮಾಡಿರೋ ರೀತಿ ಹೇಗೆಂದರೆ ಅದು ಒಳಗೂ ಹೋಗಬಹುದು. ಹೊರಗೂ ಬರಬಹುದು. ಹೊರಗೋ ಒಳಗೋ ಎಂಬ ಪ್ರಶ್ನೆ ಸೃಷ್ಟಿಕರ್ತನಿಗೆ ಬಿಟ್ಟು ನೀವು ಹೊಟ್ಟೆಯನ್ನು ಪೋಷಿಸಿ ಸಾಕು. ನನ್ನ ಹೊಟ್ಟೆಯಿಂದಾಗಿ ನಾನು ಅನೇಕ ಬಾರಿ ನಗೆಗೀಡಾಗಿದ್ದೀನಿ ನಿಜ. ಆದರೆ ಅದರಿಂದಾಗಿ ನನಗೆ ಅನೇಕ ಕಡೆ ಗೌರವವೂ ಸಿಕ್ಕಿದೆ. ಬಸ್‌ಕ್ಯೂನಲ್ಲಿ, ತಿರುಪತಿ ತಿಮ್ಮಪ್ಪನ ಕ್ಯೂನಲ್ಲಿ, ಸಿನಿಮಾ ಟಿಕೇಟ್ ಕ್ಯೂನಲ್ಲಿ ಡಿಪಾರ್ಟ್‌ಮೆಂಟ್ ಸ್ಟೋರ್ಸ್‌ನಲ್ಲಿ ನನಗೇ ಪ್ರಿಯಾರಿಟಿ! ನನ್ನ ಮುಂದೆ ಜನ ನಿಂತ್ಕೊಳ್ಳೋಕ್ಕೇ ಹೆದರ್‍ತಾರೆ. ಇನ್ನು ಕೆಲವರು ನಾನು ಸೋಶಿಯಲ್ ವೆಲ್‌ಫೇರ್ ಮಂತ್ರಿ ಅಥವಾ ಎಂ.ಎಲ್.ಎ.ನೋ ಇರಬೇಕು - ಇಲ್ಲದಿದ್ದರೆ ಈಪಾಟಿ ಹೊಟ್ಟೆ ಹೇಗೆ ಬರೋಕೆ ಸಾಧ್ಯ? ಅಂತಾನೂ ಯೋಚಿಸಿದ್ದಾರೆ. ಯಾರು ಏನೇ ಅನ್ನಲಿ, ಹೊಟ್ಟೆ ನಿಮ್ಮ ಆಸ್ತಿ ಅವರದಲ್ಲ!! ಸ್ಲಿಮ್ಮಿಂಗು, ಡೈಯಟಿಂಗು ಅಂತ ಅದಕ್ಕೆ ಕಿರುಕುಳ ಕೊಡಬೇಡಿ. ಅದನ್ನ ರಕ್ಷಿಸಿ, ಪೋಷಿಸಿ, (ಓಡಾಡೋವಾಗ ಸ್ವಲ್ಪ ಹುಷಾರ್! ಹೊಟ್ಟೆ ಕೆಳಗೆ ರೋಡಿನಲ್ಲಿ ಪಾಟ್‌ಹೋಲ್ಸ್ ಇದ್ದರೆ ಕಣ್ಣಿಗೆ ಕಾಣೋಲ್ಲ) ಹೊಟ್ಟೆ is an attitude of mind ಅನ್ನೋದು ಜ್ಞಾಪಕ ಇಟ್ಕೊಳ್ಳಿ!

3. ಕರಿಬಣ್ಣ: ಇದು ನನಗೆ ದೇವರು ಕೊಟ್ಟಿರೋ ಬರ್ತ್‌ಡೇ ಗಿಫ್ಟ್ ಅಂತ ಪರಿಗಣಿಸ್ತೀನಿ, ಹುಟ್ಟಿದಾಗ ನನ್ನ ಬಣ್ಣ (ಹಾಸ್ಪಿಟಲ್ ರೆಕಾರ್ಡ್ಸ್ ಪ್ರಕಾರ)

ಲೈಟ್‌ಗ್ರೇ ಇದ್ದಿದ್ದು ಆಮೇಲೆ, ಬೆಳಿತಾ, ಬೆಳಿತಾ ಡಾರ್ಕ್‌ಗ್ರೇ, ಲೈಟ್‌ಬ್ಲೂ, ಲೈಟ್‌ಬ್ಲಾಕ್ ಹಾಗೂ ಬ್ಲಾಕಿಷ್ ಬ್ಲಾಕ್ ಆಗಿ ಈಚೀಚೆಗೆ ಗ್ರಾನೈಟ್ ಬ್ಲಾಕ್‌ನಲ್ಲಿ ನಿಂತಿದೆ. ಇದರಿಂದ ಜೀವನದಲ್ಲಿ ನನಗೆ ಏನು ತೊಂದರೆ ಬಂದಿದೆ? ಏನೂ ಇಲ್ಲ! ಎಲ್ಲರ ತರಹ ನನಗೂ ಖಾಸಾ ಇಂಡಿಯನ್ಸ್ ಹೋಗೋ ಸ್ಕೂಲಿಗೇ ಅಡ್ಮಿಷನ್ ಸಿಕ್ತು. (ಪಾಸಾಗದೇ ಇದ್ದಿದ್ದು ಬೇರೇ ವಿಷಯ) ನನ್ನ ಬಣ್ಣ ನೋಡಿ ಒಬ್ಬ ಫೇಮಸ್ ಫೋಟೋಗ್ರಾಫರ್ ಅವರ ಡಾರ್ಕ್ ರೂಮಿನಲ್ಲಿ ಕೆಲಸ ಬೇರೆ ಕೊಟ್ಟ. ಅಲ್ಲಿದ್ದ ಕತ್ತಲೆಯಲ್ಲಿ ನಾನು ಹೇಗೆ ಐಕ್ಯವಾಗಿ ಹೋದೇ ಅಂತೀರಿ! ಒಬ್ಬಳು ಪುಣ್ಯಾತ್ಗಿತ್ತಿ ನನ್ನನ್ನು ಮದುವೇನೂ ಆದಳು. ಮಕ್ಕಳು ನನಗಿಂತ ಕಪ್ಪಗೆ ಹುಟ್ಟಿದ್ದು ಮಾತ್ರ ಅಲ್ಲ, ನನಗಿಂತಲೂ ಬುದ್ಧಿವಂತರಾಗಿವೆ, ಈ ಬಣ್ಣ ಅನ್ನೋದು ಒಂದು ಭ್ರಮೆ. ನಮ್ಮ ಅಯ್ಯಂಗಾರ್ ಮೇಷ್ಟ್ರನ್ನು ಇನ್ನೊಂದು ಸಲ ನೆನಸಿಕೋತೀನಿ' ''ನಿನ್ನ ಬಣ್ಣ ಹಾಳಾಯ್ತು; ನಿನ್ನ ಗುಣ ಮುಖ್ಯ ಕಣೋ ಮುಂಡೇದೇ!''

ಆದ್ದರಿಂದ ನನ್ನ ತರಹ ನೀವುಗಳೂ ಅಪ್ಪಟ ಕಪ್ಪಗಿದ್ದರೆ ತಲೇ ಮೇಲೆ ಚಪ್ಪಡಿಕಲ್ಲು ಎಳೆದುಕೊಂಡು ಕೂತ್ಕೋಬೇಡಿ. ಜೀವನದಲ್ಲಿ ನಮ್ಮ ಚರ್ಮದ ಬಣ್ಣ ಒನ್ ಆಫ್ ದಿ ಮೆನಿ ಕ್ರೂಶಿಯಲ್ ಐಟೆಮ್ಸು. ಆದರೆ ಅದೇ ಮುಖ್ಯ ಅಲ್ಲ. ಹಾಗೂ ಸುತ್ತಮುತ್ತ ನೋಡಿ ಪಾಠ ಕಲಿಯಿರಿ, ಯಾವತ್ತಾದರೂ ಎಮ್ಮೆಗಳು ದುಃಖಪಡೋದು ನೋಡಿದೀರಾ? ಯಾವಾತ್ತಾದರೂ ಕಾಗೆಗಳು ತಲೆ ಮೇಲೆ ಕೈ sorry ಕಾಲು ಹೊತ್ಕೊಂಡು ಕೂತಿರೋದು ನೋಡಿದಿರಾ? ಅವುಗಳಿಗೆ ತಮ್ಮ ಮೈಬಣ್ಣ ಕಪ್ಪಗಿದೇ ಅಂತ ಗೊತ್ತೋ ಇಲ್ಲವೊ! ಅಪ್ಪಟ ಕಪ್ಪಗಿದ್ದೂ ಜೀವನದಲ್ಲಿ ಸಂತೋಷವಾಗಿರಬೇಕೂಂದ್ರೆ, ನೀವೂ ಒಂದು ಎಮ್ಮೆ ಅಂತ ಅಂದ್ಕೊಂಡು ಬಿಡಿ. ಎಮ್ಮೆಯ ಜೀವನ ಅತ್ಯಂತ ಶಾಂತಮಯವಾದದ್ದು ಆರೋಗ್ಯಕರವಾದದ್ದು.

ಒಟ್ಟಿನಲ್ಲಿ ಈ ಲೇಖನದ ಮೂಲಕ ನಾನು ನನ್ನ ತರಹ ಪ್ರಾಣಿಗಳಿಗೆ ಬುದ್ಧಿವಾದ ಹೇಳೋದೇನೂಂದ್ರೆ, ಪ್ರಕೃತಿಯನ್ನು ಅಡ್ಡ ಹಾಕ್ಕೋಬೇಡಿ. ನಾವೆಲ್ಲಾ ಪ್ರಕೃತಿಯ ಮಕ್ಕಳು. ಪ್ರಕೃತಿಗೆ ತಲೆಬಾಗಿಸೋದು ಕಲಿತುಕೊಳ್ಳಿ. ಜೀವಸೃಷ್ಟಿ, ಅದರ ವಿಕಾಸ ಮತ್ತು ಅದರ ನಿರ್ನಾಮ ಎಂಬ ದೇವರ ನಾಟಕದಲ್ಲಿ ಬೋಳು ತಲೆ, ಬೊಜ್ಜುಹೊಟ್ಟೆ, ಕರೀಬಣ್ಣ ಇವೆಲ್ಲಾ ಇರ್ರೆಲೆವೆಂಟ್ ಐಟಮ್ಸ್. ನಿಮ್ಮಿಂದ ಅವಕ್ಕೆ ತೊಂದರೆಗಳುಂಟೇ ಹೊರತು ಅವುಗಳಿಂದ ನಿಮಗೆ ಯಾವ ತೊಂದರೇನೂ ಇಲ್ಲ!

Good luck with your respective lives!

ಮನುಜನಿಗೆ ಮಗು ತಂದೆ...

– ಸುಜಾತಾ ರಾಜಣ್ಣ

ಇತ್ತೀಚೆಗೆ ನಮ್ಮ ಮನೆಯಲ್ಲಿ ನನಗೆ ದಿನಾ ಶಿವರಾತ್ರಿ. ಹದಿ ಹರೆಯ ಮುಗಿಸಿ ಎರಡು ಕತ್ತೆ ವಯಸ್ಸು ದಾಟಿರುವ ನನ್ನ ಮಗ ಮನೆಯಲ್ಲಿದ್ದರೆ ರಾತ್ರಿ ಹನ್ನೊಂದರಿಂದ ಒಂದು ಘಂಟೆಯವರೆಗೆ ಟೆಲಿಫೋನಿಗೆ ಅಂಟುಕೊಂಡಿರ್ತಾನೆ. ಇಲ್ಲದಿದ್ದರೆ ಮನೆಗೆ ಬರುವುದೇ ರಾತ್ರಿ ಒಂದು ಘಂಟೆಯ ಮೇಲೆ. ಮಗ ಮನೆಗೆ ಬರುವವರೆಗೆ ಅವನ safety ಬಗ್ಗೆ ಚಿಂತಿಸಿ ನನಗೆ ಜಾಗರಣೆ. ಇನ್ನು ಯಜಮಾನರಿಗೆ ಗೊತ್ತಾದರೆ ಅವರಿಗೆ ಸಿಟ್ಟು ಬರುತ್ತೆ ಅಂತ ಅವರನ್ನು ನಿದ್ದೆ ಮಾಡಲು ಬಿಟ್ಟು ಅವನ ಬರವನ್ನು ಎದುರು ನೋಡುತ್ತಾ ಟಿ.ವಿ.ಯ ಎಲ್ಲಾ ಚಾನಲ್‌ಗಳ ಪಕ್ಷಿನೋಟ ನನ್ನ ಹಣೆಬರಹ. "ಯಾಕೆ ಇಷ್ಟು ಲೇಟ್ ಮಾಡ್ಕೊಂಡು ಮನೆಗೆ ಬರ್ತೀಯೋ" ಅಂದರೆ "ಅದು ನಿಮಗೆ ಸಂಬಂಧಪಟ್ಟ ವಿಚಾರ ಅಲ್ಲ" ಅಂತ ಮುಗುಂ ಆಗಿ ಹೇಳಿ ನನಗೂ ಅವನಿಗೂ ಏನು ಸಂಬಂಧಾನೇ ಇಲ್ಲವೇನೋ ಅಂತ ಅನ್ನಿಸುವ ಹಾಗೆ ನಡೆದುಕೊಳ್ತಾನೆ. ಇದು ಯಾಕೋ ಅತಿರೇಕಕ್ಕೆ ಹೋಗುತ್ತಾ ಇದೆ, ರಾತ್ರಿ ಅಷ್ಟೊತ್ತಿನ ವರಗೆ ಹೊರಗೇನು ಮಾಡ್ತಾನೆ ಅನ್ನೋ ಚಿಂತೆ ಹೆಚ್ಚಾಗಿ ನನಗೆ ನಿದ್ದೆ, ನೆಮ್ಮದಿ ಎರಡೂ ದೂರ ಆಗ್ತಾ ಇದೆ.

ಒಂದು ದಿನ ಅವನ Telephone ಕರೆಯನ್ನ ಕದ್ದು ಆಲಿಸಿದಾಗ ಅವನು ತನ್ನ ಡಾಕ್ಟರ್ ಅಕ್ಕನ ಮನೆಗೆ ದೂರ ಸಂಪರ್ಕ ಕರೆಮಾಡಿ ಅವಳೊಂದಿಗೆ ಕೇಳ್ತಾ ಇದ್ದ "ಅಕ್ಕಾ, ಯಾವುದಾದರೂ ಹುಡುಗಿಗೆ ಶೀಲಭಂಗ ಆದರೆ ಅದರ ರಿಯಾಕ್ಷನ್ ಗೊತ್ತಾಗೋಕೆ ಎಷ್ಟು ದಿನ ಬೇಕು?" ನನ್ನ ಹೃದಯದ ದಿಕ್ಕು ದೆಸೆ ಎರಡೂ ತಪ್ಪಿಹೋಯಿತು. ಏನು ವಿಷಯ ಅಂತ ಕೇಳಿದರೆ ನಿಮಗೆ ಹೇಗೆ ಗೊತ್ತಾಯ್ತು ಅಂತ ಕೇಳ್ತಾನೆ. ನಿನ್ನ Telephone ಕರೆನ Jap ಮಾಡಿ ತಿಳಕೊಂಡೆ ಅಂದರೆ ಅಂತಹ ಹೀನ ಕೆಲಸ ಹೇಗೆ ಮಾಡಿದಿರಿ ಅಂತ ಕೇಳೋಕ್ಕೆ ಕೂಡ ಹೇಸದ ಹುಡುಗ ನನ್ನ ಮಗ. ಅವನ principal ಏನೆಂದರೆ ನೀವು ನನಗೆ ಯಾವುದನ್ನು ಮಾಡಬಾರದು ಅಂಥ ಹೇಳ್ತೀರೋ ಅದನ್ನು ನೀವೂ ಮಾಡಬಾರದು ನಾನು ಏನಾದರೂ "ನಾನು ನಿನ್ನ ತಾಯಿ ನಿನ್ನ ಒಳ್ಳೆಯದು ಕೆಟ್ಟದ್ದು ನಾನು ತಿಳ್ಕೊಂಡಿರಬೇಕು" ಅಂದರೆ ನನಗೂ 22 ವರ್ಷ ಆಗ್ತಾ ಇದೆ ಸರಿ, ತಪ್ಪು ಚೆನ್ನಾಗಿ ಗೊತ್ತಾಗುತ್ತೆ ಅಂತ ದಬಾಯಿಸಿಬಿಡ್ತಾನೆ.

ಸರಿ, ಅವನು ಮನೆಯಲ್ಲಿಲ್ಲದಾಗ ಆತನ ಅಕ್ಕನಿಗೆ ಫೋನಾಯಿಸಿದೆ. ಅವಳು ನಿಜವಾಗಲೂ ಅವನ ಅಕ್ಕಾನೇ, 'ನಾನು ಯಾಕೆ ಅಂತ ಕೇಳಲಿಲ್ಲ ಮಮ್ಮಿ ಅವನ Case study ಗೆ ಬೇಕೇನೋ ಅಂತ ಆತನು ಕೇಳಿದ್ದಕ್ಕೆಲ್ಲಾ ಉತ್ತರ ಹೇಳಿದೆ. ಇನ್ನು

ಏನಾದರೂ ಇದ್ದಿದ್ದರೆ ಅವನೇ ಹೇಳ್ತಾ ಇದ್ದ'' ಅಂದಳು. ಇವರಷ್ಟು ತಂಪಾಗಿ ಇರೋಕೆ ನನಗೆ ಏಕೆ ಸಾಧ್ಯವಿಲ್ಲ ಅಂತ ಬೇಜಾರಾಯಿತು.

ಸ್ವಲ್ಪ ದಿವಸ ಅಂದರೆ ಸುಮಾರು ಇಪ್ಪತ್ತು ದಿವಸ ಹೀಗೇ ಕಳೀತು. ನನ್ನ ಮಗ ನನ್ನಿಂದ ಏನೋ ಮುಚ್ಚಿಡ್ತಾ ಇದ್ದಾನೆ ಅನ್ನೋ ನಂಬಿಕೆ ಬಲವಾಗ್ತಾ ಇತ್ತು. ಒಂದು ದಿವಸ ನನ್ನ ಮಗ ''ಮಮ್ಮಿ ಸ್ವಲ್ಪ Help ಮಾಡ್ತೀರಾ'' ಅಂತ ಕೇಳಿದ. ಸಧ್ಯ ಅಷ್ಟು ಮಾತ್ರ ಕೇಳಿದನಲ್ಲಾ ಅಂತ ಖುಷಿಯಿಂದ ''ಏನು ಬೇಕು?'' ಅಂತ ಕೇಳಿದೆ ''ಕೇಳಿದ್ಮೇಲೆ ಇಲ್ಲ ಅಂತ ಹೇಳಬಾರದು'' ಅಂದ. ಓಹೋ! ಹಾಗಾದರೆ ಶೀಲಭಂಗದ Reaction ಕಥೆ ಇರಬಹುದು ಅಂತ ಸರಿ ಅಂದೆ.

''ನನ್ನ friend ಹೆಸರಿನಲ್ಲಿ ಕಲ್ಕತ್ತಾಗೆ A.C. class ನಲ್ಲಿ ಇಂತಹ ದಿವಸಕ್ಕೆ ಒಂದು Ticket Book ಮಾಡಿಸ್ತೀರಾ'' ಅಂದ. ''ಸರಿ ಮೊದಲು ದುಡ್ಡು ತಂದುಕೊಡು ಮಾಡಿಸ್ತೀನಿ'' ಅಂದೆ. ''ಅದಕ್ಕೆ ನೀವೇ ಆಗಬೇಕಾ ನಿಮ್ಮ ದುಡ್ಡಿನಲ್ಲೇ ಮಾಡಿಸಿ ನನ್ನ friend ಊರಿಗೆ ಹೋದಮೇಲೆ ಅವರ ತಂದೆ ತಾಯಿ ದುಡ್ಡು ವಾಪಸ್ ಮಾಡ್ತಾರೆ'' ಅಂದ. ಸುಮಾರು ನಾಲ್ಕು ಸಾವಿರ ರೂಪಾಯಿ ಹೇಗೆ ಕೊಡೋದು? ಆ ವಯಸ್ಸಿನ ಹುಡುಗರಿಗೆ ಜವಾಬ್ದಾರಿ ಇರಲ್ಲ ಮೌಲ್ಯಗಳು ಮೊದಲೇ ಇಲ್ಲ ಆಮೇಲೆ ಕೊಡದೇ ಇದ್ದರೆ ಏನ್ಮಾಡೋದು ಅಂತ ಚಿಂತೆ ಆಯ್ತು. ಅವನ ಮುಂದೆ ಹಾಗೇ ಹೇಳಿದೆ. ''ಎಷ್ಟೋ ಜನ ನೆಂಟರು ಇಸ್ಕೊಂಡ್ಹೋಗಿ ವರ್ಷಗಳೇ ಆದರೂ ಇನ್ನೂ ಕಳುಹಿಸಲೇ ಇಲ್ಲ ನೀವು ಅವರನ್ನ ಕೇಳ್ತೀರಾ? ಇದನ್ನು ಹಾಗೆ ಅಂತ ತಿಳಿದುಕೊಳ್ಳಿ ಆದರೆ ನನ್ನ friend ಅಂತಹವರಲ್ಲ'' ಅಂತ ದಬಾಯಿಸಿದ. ''Ticket Book ಮಾಡಬೇಕಾದರೆ ಹೆಸರು, ಲಿಂಗ, ವಯಸ್ಸು ಬೇಕೇ ಬೇಕು ಅದನ್ನಾದರೂ ಹೇಳು'' ಅಂದೆ. ಆಗ ಗೊತ್ತಾಯಿತು ಅವನ friend 22 ವರ್ಷದ ಹುಡುಗಿ ಅಂತ. ಈ ವಯಸ್ಸಿನ ಮಕ್ಕಳನ್ನು ಏನೂ ಕೇಳೋ ಹಾಗೆ ಇಲ್ಲ ಕೇಳಿದರೆ ಜಗಳ, ಕೇಳದೇ ಇದ್ದರೆ ಮನಸ್ಸಿಗೆ ಕಿರಿಕಿರಿ ಅಂತೂ Ticket ಕೊಡಿಸಿದೆ ಹಣ prompt ಆಗಿ ವಾಪಸ್ಸು ಬಂತು.

''ಹೋಗಲಿ ಈಗ ಹೇಳು ಆ ಹುಡುಗಿ ಯಾರು ನೀನು ಯಾಕೆ ದುಡ್ಡು ಕೊಟ್ಟೆ'' ಅಂತ ಕೇಳಿದೆ. ಮಗ ಮಹರಾಯ ಆಗ ಹೇಳಿದ.

ಒಂದು ದಿನ ರಾತ್ರಿ ಆ ಹುಡುಗಿ ಕಾಲೇಜ್ ಹಾಸ್ಟೆಲ್ಲಿಗೆ ವಾಪಸ್ ಬರುತ್ತಾ ಇದ್ದಾಗ ಯಾರೋ ದಾಂಡಿಗರು ಅವಳನ್ನ ಕೆಡಿಸಿ, ಅವಳ ಹತ್ತಿರ ಇದ್ದ ದುಡ್ಡನ್ನೆಲ್ಲಾ ಕಿತ್ತುಕೊಂಡು ಹೋದರಮ್ಮ, ಆ ಹುಡುಗಿ ತೀರಾ ಗಾಬರಿಯಾಗಿ ಮನಸ್ಸು ಕೆಡಿಸಿಕೊಂಡಿದ್ದಳು. ಅದಕ್ಕೇ ನಾವೆಲ್ಲಾ ಫ್ರೆಂಡ್ಸ್ ದಿನಾ ಅವಳ ಬಳಿ ಹೋಗಿ ಸಮಾಧಾನ ಮಾಡಿ, ಅವಳೊಂದಿಗೆ ಕಾಲ ಕಳೆದು ಬರುತ್ತಾ ಇದ್ದೆವು. ಅಕ್ಕನ ಗೈಡೆನ್ಸ್

ತಗೊಂಡು, ಅವಳಿಗೆ ದೈಹಿಕವಾಗಿ ಏನೂ ತೊಂದರೆ ಆಗಿಲ್ಲ ಅಂತ ಗೊತ್ತಾದ ಮೇಲೆ, ಅವಳ ಮನಸ್ಸಿಗೆ ನೆಮ್ಮದಿ ತರಲು, ಸೈಕಿಯಟೆರಿಸ್ಟ್ ಹತ್ತಿರ ಕರೆದುಕೊಂಡು ಹೋದೆವು. ಆ ಸೈಕಿಯಾಟೆರಿಸ್ಟ್ ಕೂಡಾ ಇನ್ನೊಬ್ಬ ಗೆಳೆಯನ ಅಣ್ಣ. ಅವನು ಆ ಹುಡುಗಿ ಹತ್ತಿರ ಬಹು ವಿಶ್ವಾಸದಿಂದ ಮಾತನಾಡಿ, ಇದರಲ್ಲಿ ಅವಳ ತಪ್ಪೇನೂ ಇಲ್ಲ ಅಂತ ಅವಳಿಗೆ ಮನದಟ್ಟು ಮಾಡಿದ ಮೇಲೆ, ಅವಳನ್ನು ಊರಿಗೆ ಕಳುಹಿಸಿದೆವು. ಇಷ್ಟು ಮಾಡಲು ಸುಮಾರು ಒಂದು ತಿಂಗಳು ಬೇಕಾಯಿತು. ಈಗ ಅವಳಿಗೆ ಗಿಲ್ಟ್ ಫೀಲಿಂಗ್ ಇಲ್ಲ. ಹಾಗಾಗಿ, ತಂದೆ ತಾಯಿನ, ಪ್ರಪಂಚಾನ ಧೈರ್ಯವಾಗಿ ಫೇಸ್ ಮಾಡ್ತಾಳೆ, ಹೇಗಿದ್ರೂ ಈ ವರ್ಷ ಅವಳಿಗೆ ಡಿಗ್ರೀನು ಬಂದಾಯ್ತು, ಮುಂದೆ ಅವಳು ಈ ಊರಿಗೆ ಬರಬೇಕಾದ್ದಿಲ್ಲ. ಈ ಎಪಿಸೋಡ್‌ನ ಇಲ್ಲೇ ಮರೆತು, she will live happily ever after.''

ನನ್ನ ಕಣ್ಣಿನಲ್ಲಿ ನೀರು ಬಂತು. ನಮ್ಮ ಮಕ್ಕಳು ಜೀವನದ ಮೌಲ್ಯಗಳನ್ನು ಮರೆತಿದ್ದಾರೆ ಅಂತ ನಾವೆಲ್ಲಾ ಭಾಷಣ ಬಿಗೀತೀವಿ. ಆ ಹುಡುಗಿ ಹಾಗೆ ಉದ್ರೇಕಿಸುವಂತೆ ಉಡುಪು ಧರಿಸಿದರೆ, ಹೀಗೆ ಆಗಬಾರದ್ದು ಆಗುತ್ತೆ, ಈಗಿನ ಕಾಲದ ಹುಡುಗಿಯರೇ ಹೀಗೆ ಅಂತ ಕಾಲದ ಮೇಲೆ ಎಲ್ಲಾ ತಪ್ಪನ್ನು ಹೊರಿಸಿ, ನಿಶ್ಚಿಂತೆಯಿಂದ ಇದ್ದುಬಿಡ್ತೀವಿ. ಅವಳ ತಂದೆ, ತಾಯಿ, ಅವಳನ್ನು ಸರಿಯಾಗಿ ಬೆಳೆಸಿಲ್ಲ ಅಂತ ಎಲ್ಲೋ ದೂರದಲ್ಲಿರೋ ತಂದೆ ತಾಯಿಗಳ ಮೇಲೂ ಗೂಬೆ ಕೂರಿಸಿಬಿಡ್ತೀವಿ. ಎಲ್ಲಕ್ಕೂ ಹುಡುಗೀನೇ ತಪ್ಪಿತಸ್ಥಳನ್ನಾಗಿ ಮಾಡಿಬಿಡ್ತೀವಿ.

ಆದರೆ ನಮ್ಮ ಮಕ್ಕಳು, ಈ ಯಾವ ಪೂರ್ವಾಗ್ರಹವೂ ಇಲ್ಲದೇ, ಆ ಹುಡುಗಿಗೇ ತಿಳಿಯದ ಹಾಗೆ ಅವಳಿಗೆ ನೆರವು ನೀಡಿ, ಅವಳ ಭವಿಷ್ಯವನ್ನ ಸುಂದರಗೊಳಿಸಿದ್ದಾರೆ. ನಿಜಕ್ಕೂ ನಾವು ನಮ್ಮ ಮಕ್ಕಳ ಮೌಲ್ಯಗಳನ್ನ ಆಚರಣೆಗೆ ತಂದರೆ ಜೀವನ ಅರ್ಥಪೂರ್ಣವಾಗುತ್ತೆ ಅನ್ನಿಸಿತು ನನಗೆ.



''ಗೋಬಿಮಂಚೂರೀಗೆಸ್ವಲ್ಪ ಗೊಜ್ಜಿನ ಪುಡಿ ಹಾಕ್ದೇರೀ, ರುಚಿ ನೋಡಿ ಹೇಗಿದೆ?''

ಜಿಪುಣಾಗ್ರೇಸರ

– ಎಂ.ಎನ್.ಕೆ.

ಜಿಪುಣ, ಕಂಜೂಸ್, ಮೈಸರ್ ಅಂದರೆ ಯಾರು? ಅವರ ಲಕ್ಷಣಗಳೇನು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಷ್ಟ.

''ಉಣಲೊಲ್ಲ, ಉಡಲೊಲ್ಲ, ದಾನಕೊಡಲೊಲ್ಲ, ಅವನೊಡವೆ ಕಳ್ಳನಿಗೆ'' ಅನ್ನುತ್ತಾನೆ ಸರ್ವಜ್ಞ. ತನ್ನ ಆದಾಯದಲ್ಲಿ ಕನಿಷ್ಟ 10% ಸತ್ಪಾತ್ರರಿಗೆ ದಾನ ಮಾಡದವನೇ ಜಿಪುಣ. ಇಂಥಹವನಿಗೆ ರೌರವ ನರಕವೇ ಪ್ರಾಪ್ತಿ ಅನ್ನುತ್ತೆ ಧರ್ಮಶಾಸ್ತ್ರ.

''ಇಷ್ಟೇನೇ? ಇದೇನ್ಮಹಾ. ನಾನು ಇದಕ್ಕಿಂತ ಜಾಸ್ತಿ ದಾನ ಮಾಡಿದ್ದೇನೆ. ನನ್ನ ಆದಾಯದಲ್ಲಿ ಬಹಳಷ್ಟು ನನ್ನ ಹೆಂಡತಿ ಮಕ್ಕಳಿಗೇ ಪಾಲು ಕೊಟ್ಟಿದ್ದೇನೆ. ಇವರೆಲ್ಲಾ ಸತ್ಪಾತ್ರರಲ್ಲ ಅಂತ prove ಮಾಡಿ ತೋರ್ಸಿ ನೋಡೋಣ. ಕೇಳಿಲ್ವೇನ್ರೀ charity begins at home ಅನ್ನೋ ಗಾದೆ?'' ಅಂತ ನಮ್ಮ double distilled & confirmed ಕಂಜೂಸ್ ಸವಾಲ್ ಹಾಕಿದರೆ ''ಇದು ಸುಳ್ಳು'' ಅನ್ನೋ ಗುಂಡಿಗೆ ಯಾರಿಗಿದೆ?

ಈ ಕಂಜೂಸ್‌ಗಳು ನಾನಾ ಕಾಲಗಳಲ್ಲಿ, ನಾನಾ ದೇಶಗಳಲ್ಲಿ, ನಾನಾ ಬಣ್ಣಗಳಲ್ಲಿ ಕಾಣಿಸಿಕೊಂಡಿದ್ದಾರೆ, ಕಾಣಿಸಿಕೊಳ್ಳುತ್ತಿದ್ದಾರೆ. ಇವತ್ತೂ ಇದ್ದಾರೆ, ಮುಂದೇನೂ ಇರುತ್ತಾರೆ. ಸ್ನೇಹಿತರ ಜೊತೆ ಹೋಟೆಲಿಗೆ ಹೋಗಲಿ ಬಿಲ್ ಬರುವಷ್ಟರಲ್ಲಿ ಟಾಯ್ಲೆಟ್ ನೆವ ಹೇಳಿ ಆಚೆ ಹೊಗೋದು, ಕ್ಲಬ್ಬಿನಲ್ಲಿ ಇನ್ನೊಬ್ಬರ ಖರ್ಚಿನಲ್ಲೇ ಕುಡಿಯೋದು ಇವೆಲ್ಲಾ ಕೆಲವು ಕಂಜೂಸ್ ಲಕ್ಷಣಗಳು.

Walt disney ಸೃಷ್ಟಿಸಿದ uncle scrooge ಇಂಥಾ ಒಬ್ಬ ಮಹಾನ್ ಕಂಜೂಸ್. ಈತ ತನ್ನ ಕೋಲಿಗೆ ಒಂದು ಮ್ಯಾಗ್ನೆಟ್ ತಗುಲಿಸಿ ರಸ್ತೆ ಬದಿಯ ಮೋರಿಗಳಲ್ಲಿ ಬಿದ್ದಿರುವ ನಾಣ್ಯಗಳನ್ನು ಶೇಖರಿಸೀ ಶೇಖರಿಸೀ ತನ್ನ ಖಜಾನೆಗಳನ್ನು ತುಂಬಿಟ್ಟಿದ್ದಾನೆ. ಇನ್ನೂ ತುಂಬುತ್ತಿದ್ದಾನೆ. ಅವನ ಅಪಾರ ಆಸ್ತಿಯನ್ನು ಹೇಗೆ ಕಳ್ಳರಿಂದ ಕಾಪಾಡುವುದು ಎಂಬುದೇ ಅವನ ತೊಳಲಾಟ. ಇವನ ದುಡ್ಡನ್ನು ಹೇಗೆ ಲಪಟಾಯಿಸುವುದು ಎನ್ನುವುದೇ ಅಲ್ಲಿನ ಕಳ್ಳರ ಜಿಜ್ಞಾಸೆ.

ನಮ್ಮಲ್ಲೂ ಈ ಥರ ಅಂಕಲ್‌ಗಳು ಕಡಿಮೇಯೇನಿಲ್ಲ. ಅವರಿಗೆ ತಮ್ಮ ಕಪ್ಪು ಹಣ ಹೇಗೆ IT ನವರ ಕಣ್ಣು ತಪ್ಪಿಸುವುದು ಎಂಬುದೇ ಇಡೀ ಜೀವನದ ಗುರಿ. ಈ

ನಂ.2 ಹೇಗೆ ಪತ್ತೆ ಹಚ್ಚುವುದು ಎಂಬುದೇ IT ಗುರಿ. ಸದ್ಯಕ್ಕೆ ನಮ್ಮ ಅಂಕಲ್‌ಗಳ ಕೈ ಮೇಲುಗೈ ಆಗಿದೆ. ಇನ್ನೂ ಎಷ್ಟು ದಿನಾಂತ ನೋಡೋಣ.

ಒಬ್ಬರು ರಸ್ತೆಯಲ್ಲಿ ಬಿದ್ದಿರುವ ತುಕ್ಕು ಹಿಡಿದ ಮೊಳೆ, ಕುದುರೆ ಲಾಳ ಇತ್ಯಾದಿಗಳನ್ನು ತಂದೂ ತಂದೂ ತಮ್ಮ ಮನೆಯಲ್ಲಿ ರಾಶಿ ಹಾಕುತ್ತಿದ್ದರು ''ಈ ಬೀದೀ ಕೊಳೆ ಮನೇಲೇಕೆ'' ಅಂತ ಅವರ ಮನೆಯವರ ತಕರಾರು. ''ಬಿದ್ದಿರಲಿ ಬಿಡಿ. ಅದೇನು ನಿಮ್ಮ ಕಣ್ಣು ಕುಕ್ಕುತ್ತಾ? ಒಂದು ದಿನ ಉಪಯೋಗಕ್ಕೆ ಬರುತ್ತೆ ನೋಡ್ಕೊಂಡಿರಿ'' ಅನ್ನುತ್ತಿದ್ದರು ನಮ್ಮ ಅಂಕಲ್ ಸ್ಕ್ರೂಜ್. ಅವರು ಬದುಕಿದ್ದಷ್ಟು ದಿನ ಅದು ಉಪಯೋಗಕ್ಕೆ ಬರಲಿಲ್ಲ. ಅವರ ತರುವಾಯ ಬಂತು. ಆ ಮನೆ ಕೆಲಸದವನು ಆ ರಾಶಿಯನ್ನು ಕಡಲೇಕಾಯಿ ಚಿಕ್ಕೀ ಮಾರುವವನಿಗೆ ಕೊಟ್ಟು ಚಿಕ್ಕಿಯನ್ನು ತಿಂದ.

ಹೈದರಾಬಾದಿನ ನಿಜಾಮರು ಒಮ್ಮೆ viceroy ನೋಡಲು ಹೋಗಿದ್ದರಂತೆ. ಅವರ ಕೈಕೋಲು ಮುರಿದಿತ್ತು. ವೈಸ್‌ರಾಯರು ಅದನ್ನು ನೋಡಿ ಮೂಗು ಮುರಿದರು. ನಿಜಾಮರು ಹೇಳಿದ್ದು ''ನಾನು ಊರಿಗೆ ಹೋದ ಕೂಡಲೇ ಇದನ್ನು ರಿಪೇರಿ ಮಾಡಿಸುತ್ತೇನೆ'' ಅಂತ. ಹೊಸದು ಕೊಳ್ಳುತ್ತೇನೆ ಅನ್ನಲಿಲ್ಲ. ದುಡ್ಡಿದ್ದವರಿಗಲ್ಲವೇ ದುಡ್ಡಿನ ಮಹಿಮೆ ಗೊತ್ತು? ಬಹಳ ದುಡ್ಡಿದ್ದವನು ಮಾತ್ರ ದೊಡ್ಡ ಜಿಪುಣನಾಗಲು ಸಾಧ್ಯ. ದುಡ್ಡಿಲ್ಲದ ಸುಧಾಮ ಜಿಪುಣನಾದರೇನು ಬಿಟ್ಟರೇನು? ಕೇಳುವವರಾರು?

ಇಂಗ್ಲೆಂಡ್ ದೇಶದಲ್ಲಿ ಜಿಪುಣರನ್ನು ಹೀಗೆ ವಿವರಿಸುತ್ತಾರಂತೆ;

"My God. If he gets hold of a pound note, it is a prisoner in his hands!"

"That fellow can skin a flea for its skin"

"He who talks big never pays"

"He who says I dont care what it costs. I want the best means what he says. He never pays"

ಒಬ್ಬ ಜಿಪುಣನಿಗೆ ಮಹಾರಾಜರಿಗಿಂತ ನಾನೇನು ಕಡಿಮೆ ಅನ್ನೋ (ದುರ್)ಬುದ್ಧಿ ಬಂತು. ನಾನೂ ಮಹಾರಾಜರ ಸ್ಟೈಲ್ ಊಟಾ ಏಕೆ ಮಾಡಬಾರದೂ ಅನಿಸಿತು ಅವನಿಗೆ. ಮಹಾರಾಜರು ತಮ್ಮ ರೊಟ್ಟಿಯನ್ನು ತುಪ್ಪದ ಬಟ್ಟಲಲ್ಲಿ ಅದ್ದಿ ಅದ್ದಿ ತಿನ್ನುತ್ತಾರೆಂದು ಕೇಳಿದ್ದ. ಇವನೂ ತನ್ನ ತಟ್ಟೆಯ ಬದಿಯಲ್ಲಿ ಒಂದು ತುಪ್ಪದ ಬಟ್ಟಲಿಟ್ಟುಕೊಂಡು ತನ್ನ ರೊಟ್ಟಿ ಚೂರನ್ನು ಆ

ಬಟ್ಟಲಿಗೆ ತೋರಿಸಿ ತೋರಿಸಿ ತಿನ್ನುತ್ತಿದ್ದ. ಮಹಾರಾಜರ ಸ್ಟೈಲೂ ಆಯಿತು ಅವನ ಊಟ. ದುಪ್ಪಾನೂ ಉಳೀತು.

ಬಟ್ಟಲು ಅಂದಾಗ ದಾನಶೂರ ಕರ್ಣನ ಕಥೆ ಜ್ಞಾಪಕಕ್ಕೆ ಬರುತ್ತೆ. ಕರ್ಣ ಒಮ್ಮೆ ಒಂದು ಚಿನ್ನದ ಬಟ್ಟಲಲ್ಲಿ ತಿಂಡಿ ತುಂಬಿ ಅದನ್ನು ಎಡಗೈಲಿ ಹಿಡಿದು ಬಲಗೈಯಿಂದ ತಿನ್ನುತ್ತಿದ್ದನಂತೆ. ಆಗ ಒಬ್ಬ ಬ್ರಾಹ್ಮಣ ಬಂದು "ದೇಹೀ" ಅಂದನಂತೆ. ಕೂಡಲೇ ಕರ್ಣ ತನ್ನ ಎಡಗೈ ಯಿಂದಲೇ ಆ ಎಂಜಲು ಬಟ್ಟಲನ್ನು ಆ ಬ್ರಾಹ್ಮಣನಿಗೆ ಕೊಡಲು ಹೋದನಂತೆ. ಇದರಿಂದ ಕುಪಿತನಾದ ಬ್ರಾಹ್ಮಣ "ಎಲವೋ ನಿನಗೆ ಇಷ್ಟು ಅಹಂಕಾರವೇ" ಎಂದು ಘರ್ಜಿಸಿದನಂತೆ. ಕರ್ಣ ಸಾವಧಾನದಿಂದ ಹೇಳಿದನಂತೆ "ಸ್ವಾಮಿ ನೀವು ಯಾಚಿಸಿದಾಗ ನನಗೆ ಈ ಚಿನ್ನದ ಬಟ್ಟಲನ್ನು ನಿಮಗೆ ಕೊಡುವ ಮನಸ್ಸಾಯಿತು. ಈ ಬಟ್ಟಲನ್ನು ತೊಳೆದು ಬಲಗೈಯಿಂದ ನಿಮಗೆ ಕೊಡುವಷ್ಟರಲ್ಲಿ ನನ್ನ ಮನಸ್ಸು ಬದಲಾಗಬಹುದು. ಅದಕ್ಕೋಸ್ಕರ ಎಡಗೈಯಿಂದಲೇ ಕೊಟ್ಟೆ, ಕ್ಷಮೆಯಿರಲಿ." ಆ ಬಡಬ್ರಾಹ್ಮಣ ಆ ಬಟ್ಟಲನ್ನು ಸ್ವೀಕರಿಸಿದನೋ ಇಲ್ಲವೋ ಕಥೆ ಹೇಳುವುದಿಲ್ಲ. ನಮ್ಮ ಜಿಪುಣರು ನಮ್ಮ ದಾನಶೂರ ಕರ್ಣನಿಗಿಂತ ಏನೇನೂ ಕಡಿಮೆಯಿಲ್ಲ. ಅವರು ಎಂದೂ ಈ ರೀತಿ ಅಪಚಾರವನ್ನು ಮಾಡುವುದೇಯಿಲ್ಲ. ತಮ್ಮ ಎಂಜಲ ಕೈಯಿಂದ ನೊಣವನ್ನೂ ಓಡಿಸುವುದಿಲ್ಲ. ಕಾರಣ ಇಷ್ಟೇ; ಹಾಗೆ ಕೈ ಕೊಡವಿದರೆ ಅನ್ನದ ಅಗುಳುಗಳು ಹಾರಿಹೋಗಿ ಆ ನೊಣದ ಪಾಲಾಗುವುದಲ್ಲ!

ನಮ್ಮ ಹಾಸ್ಯನಟ ಬಾಲಣ್ಣನವರ ಒಂದು ಜಿಪುಣನ ಪಾತ್ರ ನೆನಪಿಗೆ ಬರುತ್ತೆ. ಅವರ ಮನೆಯಲ್ಲಿ ಅಂದು ಪೂಜೆ. ಅವರ ಪತ್ನಿ 'ನೋಡೀಂದ್ರೆ ವಠಾರದ ಮುತ್ತೈದೇರ್ನೆಲ್ಲಾ ಕರೆದಿದ್ದೇನೆ. ಚರುಪಿಗೆ ಏನಾದ್ರು ಸಾಮಾನು ತನ್ನಿ." ಅಂದಾಗ ಬಾಲಣ್ಣ ಹೇಳಿದ್ದು "ಚರುಪು ಗಿರುಪು ಮಾಡಕ್ಕೆ ಹೋಗಿ ದುಡ್ಡು ಹಾಳ್ಮಾಡ್ಬೇಡ. ಬಂದೋರು ಕೈಲಿ ಬಾಳೇಹಣ್ಣಿನ ಚಿಪ್ಪು ತಂದರೆ ಅದರಲ್ಲೇ ಎರಡು ಹಣ್ಣು ಮುರಿದು ಅವರಿಗೆ ಪ್ರಸಾದಾಂತ ಕೊಡು. ಮಿಕ್ಕಿದ್ದು ಒಳಗೆ ಇಟ್ಟುಕೋ. ಬರೀ ಕೈಲಿ ಬಂದೋರಿಗೆ ಬರೀ ಕುಂಕುಮ ಕೊಟ್ಟು ಕಳುಹಿಸು." ಈತನೀಗ ಜಿಪುಣನಯ್ಯಾ!

ಕೊನೆಯದಾಗಿ ಒಬ್ಬ ಜಿಪುಣಾಗ್ರೇಸರ ಚಕ್ರವರ್ತಿಯನ್ನು ನೋಡೋಣ. ಈತ ಒಂದು ಮದುವೆಗೆ ಹೋಗಲೇಬೇಕಾದ ಸಂದರ್ಭ ಬಂತು. ಆತ ಅಂದಿನ ಕಾಲಕ್ಕೆ ಅತೀ ಶ್ರೀಮಂತನೆಂದೂ ಅಷ್ಟೇ ಕಂಜೂಸ್ ಎಂದೂ ಹೆಸರಾದವ. ಈತ ವಧೂವರರನ್ನು ಭೇಟಿಯಾಗುವಷ್ಟರಲ್ಲಿ ಅವನ ಮನಸ್ಸು ತೋಲಾಯಮಾನವಾಗಿತ್ತು. ಇವರಿಗೆ ದುಡ್ಡು ಕೊಡಲೆ-ಬೇಡವೇ? ಕೊಟ್ಟರೆ

ಎಷ್ಟು ಕೊಡಲಿ? ಇದೇ ಅವನ dilemma. ಕೊನೆಗೂ ಒಂದು ನಿರ್ಧಾರಕ್ಕೆ ಬಂದು ತನ್ನ ರುಮಾಲಿನಿಂದ ಎರಡು ಸುರುಳಿ ಕಟ್ಟಿದ 10 ರೂ ನೋಟುಗಳನ್ನು ತೆಗೆದು ಆ ವರನ ಕೈಗಿಡುತ್ತಾ ''ನಿಂಗೆ 10. ಅವಳಿಗೆ 10'' ಅಂದ. ಆ ಗಂಡು ಸರಿ ಸರಿ ಅಂತ ತಲೆ ಅಲ್ಲಾಡಿಸಿ ಆ ಎರಡು ನೋಟನ್ನೂ ತನ್ನ ಕೋಟ್ ಜೇಬಿಗೆ ಸೇರಿಸಿದ. ಈ ಪುಣ್ಯಾತ್ಮ ಸುಮ್ಮನಿದ್ದಾನೇ? ''ಅವಳ ಹತ್ತನ್ನು ಈಗಲೇ ಕೊಡು'' ಅಂತ ಹಟಹಿಡಿದು ಅಲ್ಲೇ ಕೊಡಿಸಿದ.

ಜೈ ಜಿಪುಣಾಗ್ರೇಸರ.

★★★

ವ್ಯಂಜನ

ಕಡಲಿನ ಉಪ್ಪು ಎಲ್ಲಿ
ಎಲ್ಲಿ ಬೆಟ್ಟದ ನೆಲ್ಲಿ
ಎಷ್ಟು ರುಚಿ ಉಪ್ಪಿನಕಾಯಿ
ಎಲ್ಲಿಯದೋ ಹೆಣ್ಣು
ಎಲ್ಲಿಯದೋ ಗಂಡು
ಒಬ್ಬರಿಗೊಬ್ಬರು
ಹೋದರೆ ಹೊಂದ್ಕೊಂಡು
ಬಾಳೊಂದು ನಂದನ
ಅನುರಾಗ ವ್ಯಂಜನ

ಸೆಲೆ - ಬೆಲೆ

ಒನಕೆ ಚಿಗುರಿ ಗಿಡವಾಗಬಹುದು
ಕಳೆದ ಯೌವನ ಮತ್ತೆ ಬಂದರೂ ಬರಬಹುದು
ಏರಲುಂಟೆ ಪಾತಾಳ ಕಿಳಿದ ನೀರ ಸೆಲೆ
ಇಳಿಯಲುಂಟೆ ಗಗನಕೇರಿದ ಬೆಲೆ!

–ಹೆಚ್.ಬಿ. ವೆಂಕಟಸುಬ್ಬಯ್ಯ

ಇನ್ನೇನು ಮಾಡಾಕೆ ಆಗಾಕಿಲ್ವಾ?

- ನೀರಗುಂದ ಕೇಶವಮೂರ್ತಿರಾವ್

ಲಾಯರ್ ಬುರುಡೆ ಬಾಜೀರಾಯರನ್ನು ಸಾವ್ಕಾರ್ ಕುಬೇರಪ್ಪನವರು ಸಾಲ ನೀಡುವ ಬಗ್ಗೆ ಸಲಹೆ ಕೇಳಲು ಬಂದಾಗಿನ ಮಾತು ಕತೆ.

''ಬುದ್ಧಿ ನಮಸ್ಕಾರ''

''ಏನ್ಸಮಾಚಾರ?''

''ನಮ್ಮೂರು ಸಿದ್ಲಿಂಗಪ್ಪ ಎಲೆಕ್ಸನ್‌ಗೆ ನಿಲ್ತಾನಂತೆ. ಸಾಲಾ ಕೇಳ್ತಾನೆ, ಕೊಡ್ಬೋದಾ?''

''ಬಾಯ್ಮಾತ್ನಲ್ಲಿ ಕೊಡು ನಿಮ್ಗೇನು ತಾನೆ?''

''ನೆಂಬೌದಾ?''

''ಕಾಗದದಲ್ಲಿ ಬರಸ್ಕೊ''

''ಕಾಗದದಲ್ಲಿ ಬರಸ್ಕಂಡ್ರೆ ಗ್ಯಾರಂಟಿನಾ?''

''ಆಂಡಿಮ್ಯಾಂಡ್ ಪತ್ರ ಬರಸ್ಕೊ''

''ಇದರಿಂದೇನು ತೊಂದ್ರೆ ಇಲ್ವಾ?

''10 ರೂ. ನ ಛಾಪಾಕಾಗದ ಮೇಲೆ ಬರಸ್ಕೊ''

''ಸಾಕಾ?''

''ನೂರು ರೂಪಾಯಿನ ಛಾಪಾಕಾಗದ ಮೇಲೆ ಬರಸ್ಕೊ''

''ಇದು ಬಂದೋ ಬಸ್ತಾ?''

''ನೋಂದಣಿ ಮಾಡಸ್ಕೊ''

''ಅಸಲಿಗೆ ಮೋಸ ಇರುಲ್ವಾ?''

''ಹಂಗಾದರೆ ಮನೆ ಅಡವು ಮಾಡ್ಕೊ''

''ಎಲೆಕ್ಸನ್ನಾಗೆ ಸೋತು ಇಡುಗಂಟು ಕಳ್ಕಂಡ್ರೆ ನನ್ನ ಗಂಟು ಬತ್ತದಾ?''

''ಮನೆ ಸ್ವಾಧೀನಕ್ಕೆ ತಗೊ''

''ಅವ್ನು ತರ್ಲೆಮಾಡಿ ಕೋರ್ಟಿಗೆ ಹೋದ್ರೆ?''

''ನೀನು ಕೋರ್ಟಿಗೆ ಹೋಗು''

''ಆಮ್ಯಾಲೆ?''

''ನೀನು ಟಿ.ವಿ. ನೋಡುಲ್ವಾ ಯಾವುದೋ ಜಾಹಿರಾತು ಬರ್ತದೆ ನೋಡು 'ಫಿಲ್ ಇಟ್ ಫರ್ಗೆಟ್ ಇಟ್' ಅಂತ ಅದನ್ನ ಸ್ವಲ್ಪ ಬದಲಾಯಿಸಿದ್ರೆ 'ಫೈಟ್ ಇಟ್ ಫರ್ಗ್ಗಟ್ ಇಟ್' ಅಷ್ಟೆ!''

''ಇನ್ನೇನು ಮಾಡಾಕೆ ಆಗಾಕಿಲ್ವಾ?''

''ಆಮೇಲೆ ನೋಡ್ಕಳಾಣ!''

ದಾರ್ಶನಿಕರು

- ಶ್ರೀನಿವಾಸ ವೈದ್ಯ (ಶೀನೂ)

ಕೆಲ ದಿನಗಳ ಹಿಂದೆ ಬೆಳಗಿನ ಸುಮಾರು ಹತ್ತು ಗಂಟೆಯ ಸಮಯಕ್ಕೆ ಬಸವನಗುಡಿಯ ಕೆ.ಆರ್. ರಸ್ತೆಯಲ್ಲಿ ಆಫೀಸಿಗೆ ಹೊರಡುವ ತರಾತುರಿಯಲ್ಲಿ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದೆ. ರಸ್ತೆಯೆಲ್ಲ ಶಾಲಾ ಮಕ್ಕಳಿಂದ, ಕೆಲಸಕ್ಕೆ ಓಡುತ್ತಿರುವ ಗಂಡು ಹೆಣ್ಣುಗಳಿಂದ, ತರಕಾರಿ ಕೈಗಾಡಿಗಳಿಂದ, ಆಟೋ, ಬಸ್ಸು, ಮಾರುತಿಗಳಿಂದ ಗಿಜಿಗುಟ್ಟಿ ಹೋಗಿತ್ತು. ಜಿನುಗು ಮಳೆ ಬೇರೆ. ಜಿರಾಫೆಯಂತೆ ಕತ್ತು ಚಾಚಿ ಬಾರದ ಬಸ್ಸುಗಳ ನಿರೀಕ್ಷೆಯಲ್ಲಿ ನಿಂತಿದ್ದೆ.

ಆಗ ಇದ್ದಕ್ಕಿದ್ದಂತೆ ನಾನು ನೋಡು ನೋಡುತ್ತಿದ್ದಂತೆಯೇ, ಒಬ್ಬ ಆಧುನಿಕ ವೇಷದ ಉದ್ಯೋಗಿ ತರುಣಿ - ಬಹುಶಃ ಯಾವುದೋ ಒಂದು ತೆರದ ಕಂಪ್ಯೂಟರಿಣಿ - ಬಸ್ಸಿಗಾಗಿ ಲಗುಬಗೆಯಿಂದ ಧಾವಿಸುತ್ತಿದ್ದವಳು, ತನ್ನ ಓಟದ ನಡಿಗೆಯನ್ನು ಗಕ್ಕನೇ ನಿಲ್ಲಿಸಿ, ಎರಡೂ ಕೈಗಳನ್ನು ಮೇಲೆತ್ತಿ ('ಬ್ಯಾಂಡಿಟ್‌ಕ್ವೀನ್'ನ ಬ್ಯಾಂಡಿಟ್ಟಿ ಬಂದೂಕು ಹಿಡಿದಿರುತ್ತಾಳಲ್ಲ ಆ ಭಂಗಿ) 'ಶೂ...ಶೂ...ಶೂ...ಮಿ...ಮಿ'' ಎಂದು ಏನೇನೋ ಒಟಗುಟ್ಟಿ ಮತ್ತೆ ಒಮ್ಮೆಲೇ ಸಾಮಾನ್ಯ ಸ್ಥಿತಿಗೆ ಬಂದು, ತನ್ನ ಓಟದ ನಡಿಗೆಯನ್ನು ಮುಂದುವರೆಸಿದಳು.

''ಯಲಾ ಇವನ! ಇದ್ದಕ್ಕಿದ್ದಂಗ ಇಕಿಗೇನು ಧಾಡಿ ಆತು'' ಎಂದು ನಾನು ಆಶ್ಚರ್ಯದ ಧಕ್ಕಾದಿಂದ ಚೇತರಿಸಿಕೊಳ್ಳುತ್ತಿದ್ದಂತೆಯೇ, ಈ ಕಡೆಯಿಂದ ಒಬ್ಬ ಅರೆತೋಳ್ ಸಫಾರಿ ಕೈಯಲ್ಲಿ ಜೇಮ್ಸ್ ಬಾಂಡನಂತಹ ಆಫೀಸ್ ಬ್ಯಾಗ್ ಹಿಡಿದು ಓಡೋಡಿ ಬರುತ್ತಿದ್ದವ, ಒಮ್ಮೆಲೇ ತಡೆದು ನಿಂತು, ತನ್ನ ಆಫೀಸ್ ಬ್ಯಾಗನ್ನು ಎರಡೂ ಕೈಗಳಲ್ಲಿ ಮಡಿಮಾಡಿದ ಇಸ್ತ್ರೀ ಬಟ್ಟೆ ಹಿಡಿಯುವಂತೆ ಹಿಡಿದು, ಅಯ್ಯಪ್ಪನ ಭಕ್ತರು ದೇವಸ್ಥಾನದಿಂದ ಹೊರಬರುವಾಗ ಹಿಂಬರಕಿ ಓಡುತ್ತಾರಲ್ಲ ಹಾಗೆ ನಾಲ್ಕಾರು ಹೆಜ್ಜೆ ಹಿಂಬರಕಿ ನಡೆದು ''ಕ್ಸೂ...ಕ್ಸೂ...'' ಎಂದು ಒಟಗುಟ್ಟುತ್ತ ಇಸ್ತ್ರೀ ಬಟ್ಟೆಗಳನ್ನು ಕಾಲ್ಪನಿಕವಾಗಿ ಯಾರಾರಿಗೋ ಒಂದೊಂದಾಗಿ ಕೊಟ್ಟು, ಮತ್ತೆ ಸಾಮಾನ್ಯ ಸ್ಥಿತಿಗೆ ಮರಳಿ ಬ್ಯಾಗನ್ನು ಎಡಗೈಗೆ ವರ್ಗಾಯಿಸಿ ಯಥಾಪ್ರಕಾರ ಮುಂಬರಕಿ ಓಟಕ್ಕೆ ತೊಡಗಿದ.

ಈ ಬ್ಯಾಂಡಿಟ್ಟಿಯನ್ನೂ ಆ ಅರೆತೋಳ್ ಸಫಾರಿಯನ್ನೂ, ನನ್ನ ಸುತ್ತಲಿದ್ದ ಇನ್ನೂ ಎಷ್ಟೋ ಜನ ಕಂಡರೂ ಕಾಣದಂತೆ, ಇದೆಲ್ಲಾ ಮಾಮೂಲಿಯೇನೋ ಎಂಬಂತೆ ಇದ್ದುಬಿಟ್ಟರು.

ಆಗ ನಾನು ಬೆಂಗಳೂರಿಗೇ ಹೊಸಬ. ನನಗೆ ಇದೆಲ್ಲ ಹೊಸದು. ವಿಚಿತ್ರವೆನಿಸುತ್ತಿತ್ತು. ಜಯನಗರದಲ್ಲಿ, ಮಲ್ಲೇಶ್ವರಂನಲ್ಲಿ, ಬಸವನಗುಡಿಯಲ್ಲಿ, ಎಲ್ಲೆಂದರಲ್ಲಿ ಜನ ಹೀಗೆ ಅಡ್ಡಡ್ಡ ಕೈಕಾಲು ತಿರುಚುತ್ತ, ತಿವಿಯುತ್ತ, ಏನನ್ನೋ ಅನರ್ಘ್ಯವಾದದ್ದನ್ನು ಅಮೂಲ್ಯವಾದದ್ದನ್ನು ಹೊತ್ತವರಂತೆ ಅತ್ಯಂತ ಕಾಳಜಿ ಪೂರ್ವಕವಾಗಿ, 'ಶೂ...ಶೂ...' ಎಂದು ಓಡಾಡುತ್ತಿದ್ದದ್ದನ್ನು ಕಂಡು ವಿಸ್ಮಿತನಾಗುತ್ತಿದ್ದೆ.

ಏನಿರಬಹುದು? ಇದೆಲ್ಲ ಏನಿರಬಹುದು ಈ ಜನ ಯಾಕೆ ಹೀಗೆ ಪಿಕಾಸೋನ ಚಿತ್ರಗಳಂತೆ ಆಡುತ್ತಾರಲ್ಲ ಯಾಕಿರಬಹುದು ಎಂದು ತಿಳಿಯದೇ ಕಂಗೆಟ್ಟಿದ್ದೆ. ಆಗ ನಾನು ಬೆಂಗಳೂರಿಗಷ್ಟೇ ಅಲ್ಲ, ನನ್ನ ಆಫೀಸಿಗೂ ಹೊಸಬ. ಏಕಾಕಿ ಹೀಗಾಗಿ ಈ ಪಿಕಾಸೋ ಕೃತಿಗಳ ಬಗ್ಗೆ ಯಾರೊಡನೆ ಕೇಳಬೇಕೋ ತಿಳಿಯದೇ ಒದ್ದಾಡಿದ್ದೆ.

ನಾನು ಕೆಲಸಕ್ಕೆ ಸೇರಿದ್ದ ಆಫೀಸು ಯಾವುದೋ ಒಂದು ನಿಗಮದ ಆಧ್ಯಕ್ಷರ ಆಫೀಸು. ನಿಗಮ ಲೆಕ್ಕಕ್ಕುಂಟು ಕೆಲಸಕ್ಕಿಲ್ಲ ಎನ್ನುವಂತಹ ನಿಗಮ. ಮುಖ್ಯಮಂತ್ರಿಗಳ ಹೆಂಡತಿಯ ತಮ್ಮನಿಗೋಸ್ಕರ ಸ್ಪೆಶಲ್ ಆಗಿ ಸೃಷ್ಟಿಸಿದ್ದು. ಆಫೀಸಿನಲ್ಲಿ ಬರೀ ಕ್ಯಾಶ್ ವ್ಯವಹಾರ ಬಾಟಲಿಗಳ ಪೆಟ್ಟಿಗೆಗಳು ಇಲ್ಲಿಂದಲ್ಲಿ ಅಲ್ಲಿಂದಿಲ್ಲಿ ರವಾನೆ. ಏನೇ ಇರಲಿ ನಿಗಮ ಎಂದಮೇಲೆ ಅದರ ಅಧ್ಯಕ್ಷರಿಗೆಂದು ಒಂದು ಆಫೀಸು, ಒಂದು ಬಿಳೀ ಅಂಬಾಸಿಡರ್ ಕಾರು ಇರಲೇಬೇಕಲ್ಲವೆ? ಹಾಗೇ ನಾಲ್ಕು ಜನ ಸಿಬ್ಬಂದಿ ಇರಬೇಕಲ್ಲವೇ? ನಮ್ಮ ಆಫೀಸಿನಲ್ಲಿ ನಿರಂತರ ಸ್ವೆಟರ್ ಹೆಣೆಯುತ್ತಿರುವ ಟ್ಯಾಪಿಷ್ಟಿನಿ ಫಾತಿಮಾ ಬಿ, ವರದೇಗೌಡ ಹಾಗೂ ನಾನು ಗುಮಾಸ್ತರುಗಳು, ಆರ್ಮುಗಂ, ಪಿವನ್. ಮಾಡಲು ಕೆಲಸವಿಲ್ಲದೇ, ಆಕಳಿಸುತ್ತ ಹರಟೆ ಹೊಡೆಯುತ್ತ ನಾಲ್ವರೂ ಅನ್ಯೋನ್ಯವಾಗಿದ್ದೆವು.

ಹೀಗೇ ಕೆಲದಿನಗಳ ಸಲುಗೆ ಬೆಳೆದ ನಂತರ, ಅವತ್ತು ಊಟದ ವೇಳೆಯಲ್ಲಿ ನನ್ನ ಸಹೋದ್ಯೋಗೀ ನಿರುದ್ಯೋಗಿಗಳಲ್ಲಿ ನನ್ನ ಪಿಕಾಸೋ ಪೀಡೆಯನ್ನು ತೋಡಿಕೊಂಡೆ. ''ವರದಾ, ನೀ ನೋಡಿಯೇನೋ, ಬಸವನಗುಡಿ, ಜಯನಗರ ಭಾಗದಾಗ ಬೀದಿಯಲ್ಲಿ ಜನ ಅಡ್ಡಾಡತಾ ಆಡತಾ ಇದ್ದಕ್ಕಿದ್ದಂತೆ ಪಿಕಾಸೋ ಆಗತಾರಲ್ಲೋ... ಏನಿದು ವಿಚಿತ್ರ'' ಎಂದೆ. ''ನೀ ಏನು ಹೇಳತೀ ನಿನಗರ‌ಽ ತಿಳೀತೈತಾ?'' ಎಂದ ವರದ. ಈ ಮಧ್ಯೆ ಆರ್ಮುಗಂ ತನ್ನ ಆರು ಮೊಳದ ಮೂಗಂ ತೂರಿ ''ಏನದು?'' ಎಂದ. ನಾನು ಡಿಟೇಲ ಆಗಿ ಹೇಳಿದೆ. ಎಲ್ಲರು ತಲೆಕೆರೆದುಕೊಂಡದ್ದಷ್ಟೇ ಬಂತು. ಆಗ ಟೈಪಿಷ್ಟಿ ಫಾತಿಂಬಿ ತನ್ನ ಬುರಖಾದ ಮೇಲ್ಮಹಡಿಯ ಕಿಟಕಿಯ ಪರದೆಯನ್ನು ತಲೆಯ ಮೇಲೆ ಹಾರು ಹೊಡೆದು

''ಝೋರೋ''ನಂತೆ ಅಥವಾ ''ಸ್ಪೈಡರ್ ವುಮನ್'' ನಂತೆ ಕಣ್ಣು ಮತ್ತು ಮುಕ್ಕಾಲು ಮೂಗನ್ನು ಮಾತ್ರ ಬೆಳಕಿಗೆ ಬಿಟ್ಟು; ''ಶೀನೂ ನೀ ಎಷ್ಟು ತಿಳಿಸಿ ಹೇಳಿದರೂ ತಿಳಿಯೋದು ಮುಶ್ಕಿಲ, ನೀ ಏನೇನು ನೋಡಿದೀಯೋ ಅದನ್ನು ಜರಾ ಆ್ಯಕ್ಟಿಂಗ್ ಮಾಡಿ ತೋರಿಸು'' ಎಂದಳು.

ನಾನು ತುಸು ಮೈಥಳಿ ಬಿಟ್ಟು, ಬ್ಯಾಂಡಿಟ್ ಕ್ವೀನಿಯನ್ನೂ, ಅರೆತೋಳ್ ಸಫಾರಿಯನ್ನೂ ಇತರೇ ಒಂದಿಬ್ಬರು ಪಿಕಾಸೋಗಳನ್ನೂ ಅಭಿನಯಿಸಿ ತೋರಿಸಿದೆ. ನನ್ನ ಅಭಿನಯ ಮುಗಿಯುತ್ತಿದ್ದಂತೆಯೇ ಮೂವರಿಗೂ ಮೆಲ್ಲಮೆಲ್ಲನೇ ತಿಳವಳಿಕೆ ಮೂಡಿ ಅವರೆಲ್ಲ ಮಂದಸ್ಮಿತರಾಗಿ ''ಅದೇSSS... ಓಹೋ...ಅದಾSSSSSS... ಇಷ್ಟೇನಾ...?'' ಎಂದು ಅಸಡ್ಡಾ ರಾಗ ಎಳೆದು ತಮ್ಮ ತಮ್ಮ ಊಟದ ಡಬ್ಬಿಗಳಲ್ಲಿ ಮೂಗು ತೂರಿದರು.

ತುಸು ಸಮಯ ಕಳೆದು ಫಾತಿಂಬೀನೇ ಹೇಳಿದಳು ''ಶೀನೂ ನೀ ಏನು ಹೇಳಿದೆಲ್ಲ ಜಯನಗರ, ಬಸವನಗುಡಿ, ಮಲ್ಲೇಶ್ವರಂ ಏರಿಯಾದಾಗ ಪಿಕಾಸೋಗಳು ಅಡ್ಡಾಡತಿರತಾರ ಅಂತS, ಯಾಕ ಗೊತ್ತೇನು? ಅಲ್ಲೆಲ್ಲ ದರ್ಶನೀ ಹಾಟೇಲಗೋಳು ಬಹಾಳ ಅದಾವ. ಜನ ಎಲ್ಲ ಈ ದರ್ಶನಿಗಳಿಗೆ ಜೇನುನೊಣ ಮುಕರಿಧಂಗ ಮುಕರಿರತಾರ. ಹಂತಾ ಬುಚಗುಡೂ ಗದ್ದಲದಾಗಿಂದ ದರ್ಶನೀ ಹೋಟೆಲದ ಬಳಗ ಕೌಂಟರದ ತನಕ ಹೋಗಿ, ಇಡ್ಲೀನೋ ದೋಸಾನೋ ಕಾಫೀನೋ ಎರಡೂ ಕೈಯಾಗ ಹಿಡಕೊಂಡು, ನೆಲಕ್ಕ ಬೀಳಧಂಗ, ಇನ್ನೊಬ್ಬರಿಗೆ ಢಿಕ್ಕಿ ಹೊಡಿಧಂಗ, ಮಂದೀ ಮೈಮ್ಯಾಲ ತಲೀಮ್ಯಾಲ ಛಲ್ಲಧಂಗ, ಹೊರಗ ರಸ್ತೇದ ಮ್ಯಾಗ ತಂದು ತಿನಬೇಕಾದರ ಹಾಂಗ ಬ್ಯಾಂಡಿಟ್ಟು, ಸಫಾರಿ, ಪಿಕಾಸೋ ಎಲ್ಲಾ ಆಗಬೇಕಾತೇತಿ.'' ಎಂದು ತಿಳಿ ಹೇಳಿದಳು.

ನನಗೆ ಹಗೂರಾಗಿ ಕತ್ತಲೆ ಕಳೆದು ಜ್ಞಾನೋದಯವಾಗತೊಡಗಿತು. ''ಆದರS ಅದೇನೋ ತ್ಯೂ... ತ್ಯೂ... ಕ್ಯೂ... ಕ್ಯೂ... ಮಿ... ಮೀ... ಅಂತ ಒಟಗುಡತಿರತಾರಲ್ಲ ಅದೇನು?'' ಎಂದೆ.

''ಅದSSS.. 'ಎಕ್ಸ್‌ಕ್ಯೂಸ್‌ಮಿ' ಇರಬೇಕು'' ಎಂದ ವರದೇಗೌಡ ಮಧ್ಯ ಪ್ರವೇಶಿಸಿ.

''ಎಲ್ಲಾ ಖರೆ,... ಆದರSS ಈ ಮಂದಿ ದರ್ಶನೀ ಹಾಟೇಲದ ಹೊರಗ ರಸ್ತೇದಾಗ ಪಾರ್ಕಿನ್ಯಾಗ, ಒಮ್ಮೊಮ್ಮೆ ಆಫೀಸಿನ್ಯಾಗ ಸಹಿತ ಪಿಕಾಸೋ ಆಗತಾರಲ್ಲ ಅದಯಾಕ?'' ಎಂದೆ.

ಆಗ ನನ್ನ ಮೌಢ್ಯಕ್ಕೆ ಕನಿಕರಿಸುತ್ತ ''ಶೀನೂ... ಬೆಂಗಳೂರ ಮಂದಿ ಹೊರಗ ತಿನ್ನೋದು ಬಹಾಳ, ಬಹಾಳ ಏನು ಹೆಚ್ಚಾಗಿ ಎಲ್ಲಾರೂ ಹೊರಗೇ ತಿಂತಾರ...

ಎಷ್ಟೋ ಫ್ಯಾಮಿಲಿಗಳು ಮನ್ಯಾಗ ಅಡಿಗೀನ ಮಾಡೂದಿಲ್ಲ... ಅಡಿಗೀ ಮರತೇ ಬಿಟ್ಟಿದ್ದಾರ... ಹಂಗಾಗಿ ದರ್ಶನಿ ಹಾಟೇಲ್‌ಗಳ ಬಳಗ, ಮೈ ಬಗ್ಗಿಸಿ, ಹಿಗ್ಗಿಸಿ, ಡೊಗ್ಗಿಸಿ, ಕೊಂಕಿಸಿ, ಡೊಂಕಿಸಿ, ಅದs ರೂಢಾ ಆಗಿ ಬಿಟ್ಟಿರತೈತಿ. ಹಂಗಾಗಿ ಅಭ್ಯಾಸಬಲದಿಂದ ರಸ್ತೇದಾಗ ಪಾರ್ಕಿನ್ಯಾಗ ಆಫೀಸಿನ್ಯಾಗ ಎಲ್ಲೆಂದರಲ್ಲೆ ಹಂಗ ಬ್ಯಾಂಡಿಟ್ಟ, ಪಿಕಾಸೋ ಆಗತಿರತಾರ'' ಎಂದು ತಿಳಿ ಹೇಳಿದಳು ನನಗೆ ಜ್ಞಾನವಿತ್ತ ಶಾರದಾಂಬಿ ಆ ಘಾತಿಂಬಿ.

ಈಗ ನನ್ನ ಮನಕ್ಕೆ ಕವಿದ ಮಂಕು ಕರಗಿ ತಿಳಿವಿನ ಬೆಳಕು ಪಸರಿಸಿತು. ಬರ್‍ತಾ ಬರ್‍ತಾ ನಾನೂ ಬೆಂಗಳೂರಿನ ತುಂಬ, ಇವತ್ತು ಇಲ್ಲಿ, ನಾಳೆ ಅಲ್ಲಿ ನಾಡಿದ್ದು ಎಲ್ಲೆಂದರಲ್ಲಿ ದರ್ಶನಿಗಳಲ್ಲಿ ಹೊಕ್ಕು ಮೈ ಬಗ್ಗಿಸಿ, ತಲೆ ತಗ್ಗಿಸಿ, ಪರಮಾತ್ಮನ ದರ್ಶನಕ್ಕಾಗಿ ಹಂಬಲಿಸುವ ಭಕ್ತನಂತೆ ''ದರುಶನ ದೇ ಪರಮಾತ್ಮ ನಾಥಾ ಮೇರೆ'' ಎಂದು ಭಜಿಸಿ, ಭುಂಜಿಸಿ, ಮತ್ತೆ ಮತ್ತೆ ದರ್ಶನಾಪೇಕ್ಷಿಯಾಗಿ, ದರ್ಶನಾಕಾಂಕ್ಷಿಯಾಗಿ ವರ್ಷಾರು ತಿಂಗಳ ಕೊನೆಗೆ ಒಬ್ಬ ಮಹಾನ್ ದಾರ್ಶನಿಕನಾದೆ.

★★★

ನಮ್ಮ ದೇಶವನ್ನು ಭಾವೈಕ್ಯತೆಯೆಡೆಗೆ, ಧರ್ಮ ನಿರಪೇಕ್ಷೆಯೆಡೆಗೆ, ಜಾತ್ಯಾತೀತಯೆಡೆಗೆ ಕೊಂಡೊಯ್ಯುವಲ್ಲಿ ಈ ದರ್ಶನಿಗಳ ಪಾತ್ರ ಬಲು ದೊಡ್ಡದೆಂದೇ ಹೇಳಬೇಕು.

ಇಲ್ಲಿ ಮತಾಂಧ ಜುಟ್ಟುಗಳೂ ಫಂಡಮೆಂಟಲಿಸ್ಟ ಗಡ್ಡಗಳೂ ಒಟ್ಟಾಗಿ ಇಡ್ಲಿ ಕತ್ತರಿಸುವುದನ್ನು ನೋಡುವದೇ ಒಂದು ಸಂತೋಷ!

ಚೂಡಿ ದಾರಿಣಿಯರೂ, ಲಂಗಧಾರಿಣಿಯರೂ ಅಕ್ಕ ಪಕ್ಕದಲ್ಲಿ ನಿಂತು ಚೌ ಚೌ ಮೆಲ್ಲುವದನ್ನು ನೋಡುವ ಸೊಗಸೇ ಸೊಗಸು!

ನಾಭಿ ದರ್ಶಿಣಿಯರೂ ಒಳಗಚ್ಚಿಣಿಯರೂ ಒಂದೆಡೆ ಸೇರಿ ರವೆ ಇಡ್ಲಿಗಳನ್ನು ರವಾನಿಸುವ ನೋಟವೇ ನೋಟ!

ದೇಶ ಕಾಣದ ತರುಣರೂ ನೆಲ ಕಾಣದ ತರುಣಿಯರೂ ನಾನಾ ತೆರನ ದೋಸೆಗಳನ್ನು ಹಿಗ್ಗಾಮುಗ್ಗಾ ಜಗ್ಗಾಡುವದನ್ನು ನೋಡಿಯೇ ಆನಂದಿಸಬೇಕು!

ಬೆದೆ ಬಂದ ಮಕ್ಕಳೂ, ಹರೆ ಹೋದ ಮುದುಕರೂ ಸಾಂಬಾರದೋಳ್ ವಡೆಯಂ ತೇಲಿಸಿ ಮುಳುಗಿಸಿ ಗುಳುಮಿಸುವ ದೃಶ್ಯ ಸಾಟಿಯಿಲ್ಲದ್ದು!

ಗೌಡಾನುಯಾಯಿಗಳೂ ಹೆಗಡೆ ಹಿಂಬಾಲಕರೂ, ತಮ್ ತಮ್ಮ ವೈರವಂ ಕ್ಷಣಕಾಲ ಮರೆತು ತೈರೊಡೆಗಳ ತಳ್ಳುವದನು ವೀಕ್ಷಿಸುವದೇ ಭಾಗ್ಯ!

ಸುಬ್ರಹ್ಮಣ್ಯರೂ ಇಬ್ರಾಹಿಮರೂ ಒಂದೆಡೆ ಕಲೆತು ಪೊಂಗಲ್ ನುಂಗುವ ನೋಟವೇ ಬೇರೆ!

ಜನಿವಾರಗಳೂ ಶಿವದಾರಗಳೂ, ತಮ್ ತಮ್ಮ ಉಡದಾರಗಳಂ ಸಡಿಲಿಸಿ ಕಾಯೊಬ್ಬಟ್ಟನ್ನು ಕತ್ತರಿಸಿ ಹೊಯುವ ದೃಶ್ಯ ಅದರದೇ!

ಅಜಸ್ತನಿಯರೂ ಗಜ ನಿತಂಬಿನಿಯರೂ ಭುಜಕ್ಕೆ ಭುಜ ಬೆಸೆದು ಭಜಿ ಭುಂಜಿಸುವ ಹುಮ್ಮಸ್ಸನ್ನು ನೋಡಲೇಬೇಕು!

ಉತ್ತರದ ಉದ್ದ ಮೂಗುಗಳೂ ದಕ್ಷಿಣದ ದಪ್ಪ ತುಟಿಗಳೂ ಕಪ್ಪು ಕೆಂಪಿನ ಜಾಮೂನುಗಳನ್ನು ಸರಿಸುವ ಕ್ರಿಯೆ ಅದ್ವಿತೀಯವಾದದ್ದು!

ಸುಬ್ರಾಯ ಕಮ್ತಿಗಳೂ ಬಬ್ಬರ ಕಮ್ತಿಗಳೂ ಅಬ್ಬರವಿಲ್ಲದೇ ಉಪ್ಪಿಟ್ಟೆಳಿಸುವದು ಅನಾದೃಶ!

ಬಾಡುಂಬ ಗೌಡಾಂಗನೆಯರೂ ಕಡುಬುಂಬ ಮಡಿ ಮುತ್ತೈದೆಯರೂ ಕೂಡಿ ಜಿಗಿಜಿಗಿದು ಜಿಲೇಬಿ ಜಗಿಯುವದನ್ನು ನೋಡಿಯೇ ಅರಿಯಬೇಕು.

ಒಟ್ಟಿನಲ್ಲಿ ಏನಪಾ ಎಂದರೆ; ಮಕ್ಕಳು ಮುದುಕರು, ಮಹಿಳೆಯರು, ಮಹನೀಯರು, ಲತಾಂಗಿಯರು ಲಫಂಗರು, ಶಿಷ್ಯರು ಭ್ರಷ್ಟರು, ದುಷ್ಟರು ಕಮ್ಯುನಿಷ್ಟರು, ಆರ್.ಎಸ್.ಎಸ್.ನ ಚಡ್ಡೀ ಹೈಕಳು ಇತರೇ ಬಡ್ಡೀ ಮಕ್ಕಳು, ನಮ್ಮ ದೇಶದ ಛಪ್ಪನ್ನೈವತ್ತಾರು ನಾಡನಾಗರಿಕರು ಯಾರೆಂದರೆ ಅವರು ದರ್ಶನಿಗೆ ಮೊರೆಹೊಕ್ಕು ಧನ್ಯರಾಗುತ್ತಿರುತ್ತಾರೆ.

ಅಷ್ಟೇ ಅಲ್ಲದೆ ದರ್ಶನಿಗಳ ಕಕ್ಷೆಯಲ್ಲಿ ಬರುವವರಿಗೆ, ಅದರ ಕಕ್ಷೆಯಲ್ಲಿ ಇರುವವರೆಗೆ ದೇಹದ ಸಮಸ್ತ ಅಂಗಗಳೂ ನಿಷ್ಕ್ರಿಯವಾಗಿ ಜಿವ್ಹಾಂಗ ಮಾತ್ರ ಆ ಉಳಿದೆಲ್ಲ ಅಂಗಗಳ ಶಕ್ತಿಯನ್ನು ಹೀರಿಕೊಂಡು ಪ್ರಚಂಡ ಚೇತನಾಮಯಿಯಾಗಿ ರಣೋತ್ಸಾಹದಿಂದ ತಿಂಡಿಯ ತಿವಿಯಲು ಆತುರದಿಂದ ನೀರೊಡೆದು ಹಪಹಪಿಸುತ್ತಿರುತ್ತದೆ. ಅರ್ಜುನನಿಗೆ ಬಿಲ್ಲು ವಿದ್ಯಾಭ್ಯಾಸದಲ್ಲಿ ತೊಡಗಿದಾಗ ಮರದ ಮೇಲಿನ ಪಕ್ಷಿಯ ಕಣ್ಣು ಮಾತ್ರ ಕಾಣುತ್ತಿರುತ್ತದಲ್ಲವೇ, ಹಾಗೆಯೇ ಈ ದರ್ಶನೀ ನೂಕು ನುಗ್ಗಲಿನ ಜಿಹ್ವಾ ಜೀವಿಗಳಿಗೆ ಕಾವಲಿನ ಮೇಲಿನ ದೋಸೆ ಮಾತ್ರ ಕಾಣುತ್ತಿರುತ್ತದೆ. ಉಳಿದಂತೆ ಅವರ ದೇಹ, ಮನಸ್ಸು, ಆತ್ಮಗಳೆಲ್ಲ ಬರಡಾಗಿ ಬಿಟ್ಟಿರುತ್ತವೆ.

ಇಲ್ಲಿ ಯಾರೂ ಒಬ್ಬರಿಗೊಬ್ಬರು ಢಿಕ್ಕಿ ಹೊಡೆಯುವದಿಲ್ಲ, ಕಾಲು ಮೆಟ್ಟುವದಿಲ್ಲ, ಕೆಕ್ಕರಿಸಿ ನೋಡುವದಿಲ್ಲ, ತುಪ್ಪರಿಸಿ ಉಗಿಯುವದಿಲ್ಲ, ಕುಕ್ಕರಿಸಿ ಕೂಡುವದಿಲ್ಲ, ಕಿಸೆ ಕತ್ತರಿಸುವುದಿಲ್ಲ, ಕಿಸಿ ಕಿಸಿ ನಗುವುದಿಲ್ಲ, ಕೆಣುಕುವದಿಲ್ಲ, ಅಣಕಿಸುವದಿಲ್ಲ ಮೈಗೆ ಮೈ ತಾಗಿಸುವುದಿಲ್ಲ, ಕಣ್ಗೆ ಕಣ್ ಬೆಸೆಯುವದಿಲ್ಲ. infact

ಇಲ್ಲಿ ನಾನು, ನನ್ನದೆಂಬ ಆತ್ಮಾಭಿಮಾನವೆಲ್ಲ ಕರಗಿ ನೀರಾಗಿ, ಆ entire ದರ್ಶನೀ crowd ಏ ಒಂದು monolithic ಏಕಾತ್ಮವಾಗಿ, ದೋಸೋಪಾಸನೆ (ದೋಸೆ+ ಉಪಾಸನೆ= ದೋಸೋಪಾಸನೆ ವೃದ್ಧಿಸಂಧಿ) ಯಲ್ಲಿ ತೊಡಗಿಬಿಟ್ಟಿರುತ್ತದೆ. ಅಪವಾದಕ್ಕೆ ಆಗೀಗ ಚಿಕ್ಕಪುಟ್ಟ ಅಪಘಾತಗಳಾದರೂ ಅದನ್ನಾರು ಲಕ್ಷಿಸುವರು?

ದರ್ಶನೀ ಗದ್ದಲಗಳಲ್ಲಿ ನೀವು ಎಂದಾದರೂ ಜೇಬುಗಳ್ಳತನದ ಬಗ್ಗೆ ಕೇಳಿದ್ದೀರೇನು? ಹುಡುಗಿಯರ ಚುಡಾಯಿಸುವ ತುಡುಗರನ್ನು ಕಂಡಿದ್ದೀರೇನು? ನಿರಂತರ ಗೊಣಗುಟ್ಟುವ ವೃದ್ಧರ ಕಿರಿಕಿರಿಯನ್ನು ಕೇಳಿದ್ದೀರೇನು? ಆಫೀಸುಗಳಲ್ಲಿ ದೃಷ್ಟಿಕ್ಷೇಪ ಮಾತ್ರದಿಂದ ಕಾಮುಕರ ಕಿರುಕುಳ (sexual harrassment) ವೆಂದು ಕೂಗಾಡುವ ಲಲನಾಮಣಿಗಳು, ಸ್ವಸಂತೋಷದಿಂದ ದರ್ಶನಿಗಳ ಧಕ್ಕಾಮುಕ್ಕಿಯಲ್ಲಿ ಮುನ್ನುಗ್ಗಿ ಸಮ್ಮಿಳಿತರಾಗುವದನ್ನು ನೀವು ಕಂಡಿಲ್ಲವೇನು?

ಇಲ್ಲ, ಇಲ್ಲ! ಈ ಲೋಕವೇ ಬೇರೆ. ಇಲ್ಲಿನ ಈ ಆಟವೇ ಬೇರೆ. ಇಲ್ಲಿ ಬಾಹ್ಯ ಜಗತ್ತಿನ ಕಾಮ ಕ್ರೋಧ ಲೋಭ ಮೋಹ ಮತ್ಸರಗಳಿಗೆ ಆಸ್ಪದವೇ ಇಲ್ಲ. ಇಲ್ಲಿ ಇರುವದು ಒಂದೇ ಸತ್ಯ. ಅದುವೇ,

''ಮಸಾಲೆ ಸತ್ಯ, ಜಗನ್ಮಿಥ್ಯ!''

ಇಲ್ಲಿನ ಸಮಸ್ತ ಜನಸ್ತೋಮವೆಲ್ಲ, ದೋಸಾಜೀವರಾಗಿ, ದೋಸೋನ್ಮತ್ತರಾಗಿ ದೋಸಾಭಿಮುಖರಾಗಿ ''ದೋಸೋಹಂ, ತವ ದೋಸೋಹಂ'' ಎಂದು ದೋಸಸ್ತೋತ್ರವನ್ನು ಪಠಿಸುತ್ತ ಸಾಕ್ಷಾತ್ ದೋಸಾಂಶ ಸಂಭೂತರಾಗಿಬಿಟ್ಟಿರುತ್ತಾರೆ. ಈ ತ್ಯಾಗಾತ್ಮ್ಯದಲ್ಲಿರಬೇಕಾದರೆ, ಉಳಿದ ಅರಿಷಡ್ವರ್ಗಗೂ ವಿಕಾರಗಳೂ ಅವರನ್ನು ತಟ್ಟುವದೆಂತು?

ಆದರೆ, ಬರೀ ಸೈದ್ಧಾಂತಿಕವಾಗಿ ಎಷ್ಟೊಂದು ಹೇಳಿದರೂ ದರ್ಶನಿಗಳ ಮಹತ್ವವನ್ನು ಮನದಟ್ಟು ಮಾಡುವದು ಕಷ್ಟಸಾಧ್ಯವೇ ಸರಿ. ಆದ್ದರಿಂದ ಕೆಲವು ಉದಾಹರಣರೂಪೀ ಸ್ವಾನುಭವಗಳನ್ನು ಹೇಳಿ ಈ ದರ್ಶನ ಪುರಾಣಕ್ಕೆ ಮಂಗಳ ಹಾಡುತ್ತೇನೆ.

★★★

ಒಮ್ಮೆ ನಾನು ಬಸವನಗುಡಿಯಲ್ಲಿ ಯಾವದೋ ಒಂದು ದರ್ಶನಿಯ ಪಕ್ಕದಲ್ಲಿ ನನ್ನ ಪಾಡಿಗೆ ನಾನು ನಡೆದು ಹೋಗುತ್ತಿದ್ದೆ. ಆಗ ತರುಣಿಯೊಬ್ಬಳು ಎರಡಡಿ ಎತ್ತರದ ಪುಟ್ಟ ಪಥದ ಮೇಲೆ ನಿಂತವಳು, ಬಿಸಿ ಬಿಸಿ ದೋಸೆಯನ್ನು ಸುಡು ಸುಡು ತಟ್ಟೆಯಲ್ಲಿ ಹಿಡಿದು ಒದ್ದಾಡುತ್ತಿದ್ದವಳು, ನನ್ನನ್ನು ಕಂಡು

''ಅಂಕಲ್ ಸ್ವಲ್ಪ ಬರ್ತೀರಾ?'' ಎಂದಳು. ಇಪ್ಪತ್ತರ ತರುಣಿ ಕರೆದರೆ ಹೋಗದ ಐವತ್ತರ ಅಂಕಲ್ ಯಾವನಾದರೂ ಇದ್ದಾನೆಯೇ? ನಾನೂ ಹೋದೆ. ಕೂಡಲೇ ತರುಣಿ ನನ್ನನ್ನು ರಸ್ತೆಯ ಮೇಲೆ ಆಚೆಕಡೆ ಮುಖ ಮಾಡಿ ನಿಲ್ಲಿಸಿ, ನನ್ನ ತಲೆಯ ಮೇಲೆ ಬಿಸಿ ದೋಸೆಯ ತಟ್ಟೆಯನ್ನಿಟ್ಟು ತಿನ್ನತೊಡಗಿದಳು. ಅಲ್ಲದೇ ''ಅಂಕಲ್ ನೋಡಿ ಇಷ್ಟು ಜನ ಬೋಡರಿದ್ದಾರೆ, ಒಬ್ಬರಿಗೂ ನಿಮ್ಮ ಹಾಗೆ ಸಪಾಟಾದ ಟೇಬಲ್ ತರಹದ ತಲೆ ಇಲ್ಲ ಛಿ! ಎಲ್ಲ ಬೋಡರ ತಲೆಗಳೂ ಗುಡ್ಡ ಬೆಟ್ಟಗಳೇ. ನಿಮ್ಮಂತೆ ದೋಸೆ ತಿನ್ನಲೆಂದೇ ಹೇಳಿ ಮಾಡಿಸಿದಂತಹ ತಲೆಯ ಬೋಡರು ಸಿಕ್ಕುವದು ಅಪರೂಪ... ಆಯಿತು... ಆಯಿತು... ಇನ್ನೇನು ಕೊನೆಯ ತುತ್ತು ಅಂಕಲ್... ತಲೆ ಅಲುಗಿಸಬೇಡಿ'' ಎಂದು ''ಅSSSS'' ಎಂದು ತೇಗಿ ನೀರು ಕುಡಿದು ''ತುಂಬ ಥ್ಯಾಂಕ್ಸ್ ಅಂಕಲ್... ತೊಂದರೆ ಕೊಟ್ಟೆ... ನೀವು ದಿನಾಲೂ ಇದೇ ಟೈಮಿಗೆ ಇಲ್ಲಿ ಬರ್‍ತೀರಾ?'' ಎಂದು ಕೇಳುತ್ತ ಮೋಪೆಡ್ ಏರಿದಳು.

★★★

ಇನ್ನೊಮ್ಮೆ ಹುಡುಗರಿಬ್ಬರು ದರ್ಶನಿ ಗದ್ದಲದಲ್ಲಿ ಕೌಂಟರಿನಿಂದ ಎರಡೆರಡು ಇಡ್ಲಿ ಸಾಂಬಾರಗಳ ತಟ್ಟೆಗಳನ್ನು ಕೈಲಿ ಜೀವ ಹಿಡಿದು ತರುತ್ತಿರಬೇಕಾದರೆ; ಪಕ್ಕದಲ್ಲಿ ನಿಂತಿದ್ದ ಒಬ್ಬ ಹೋತದಂತೆ ಕುರುಚಲು ಗಡ್ಡ ಬಿಟ್ಟ ನವ್ಯ ಕವಿಗೆ ಡ್ಯಾಶ್ ಹೊಡೆದುಬಿಡಬೇಕೆ? ಇವರ ತಟ್ಟೆಯ ಸಾಂಬಾರವೆಲ್ಲ ಹೋತ ಗಡ್ಡಿಗನ ಗಡ್ಡಕ್ಕೆ ಮೆತ್ತಿ ಹೋಯಿತು.

ಹುಡುಗರಲ್ಲಿ ಒಬ್ಬ, ''ಛೇ ಅನ್ಯಾಯವಾಗಿ ಸಾಂಬಾರವೆಲ್ಲ ಚೆಲ್ಲಿ ಹೋಯಿತಲ್ಲೋ...'' ಎಂದು ಹಲುಬುತ್ತಿರಬೇಕಾದರೆ, ಆ ಇನ್ನೊಬ್ಬ, ತುಸು ದಿಟ್ಟ ಹುಡುಗ ತನ್ನ ಸ್ನೇಹಿತನಿಗೆ ''ತಾಳು'' ಎಂದು ಲಗುಬಗೆಯಿಂದ ಆ ಹೋತನ ಬಳಿ ತೆರಳಿ ಅವನ ಗಡ್ಡದ ಕೆಳಗೆ ಒಂದು ಖಾಲಿ ತಟ್ಟೆ ಹಿಡಿದದು, ಆ ಹೋತನ ಗಡ್ಡವನ್ನು ಹಿಂಡಿ ಹಿಂಡಿ ಅಳಿದುಳಿದ ಸಾಂಬಾರವನ್ನುಳಿಸಿಕೊಂಡು ಬಂದ. ಈ ಪ್ರಕ್ರಿಯೆಯಲ್ಲಿ ಅರ್ಧ ಗಡ್ಡವೂ ಕಿತ್ತು ಕೈಗೆ ಬಂತು.

ಅದಕ್ಕೇ ಅಲ್ಲವೇ ವಚನಕಾರರು ''ಇಡ್ಡಲಿ ತಿನ್ನುವವರ ಮುಂದೆ ಗಡ್ಡವ ಕಳೆದುಕೊಂಡೆಯಾ ಹೋತೇ?'' ಎಂದು ಹಾಡಿದ್ದು.

★★★

ಮತ್ತೊಮ್ಮೆ ನಾನು ಹೆಂಡತಿಯನ್ನೂ ಮಗಳನ್ನೂ ಮಲ್ಲೇಶ್ವರದ ''ಫಲಹಾರ ದರ್ಶಿನಿ''ಯ ಹೊರಗೆ ನಿಲ್ಲಿಸಿ, ಆ ಜನಸಮ್ಮರ್ದದಲ್ಲಿ ಧುಮ್ಮಿಕ್ಕಿ, ಮೊಳಕೈಯಿಂದ ಅವರಿವರ ಪಕ್ಕೆಯಂ ತಿವಿದು, ಕೂದಲು ಕಿತ್ತಿ, ಮೂಗಂ ತಿರುಚಿ, ನೇತ್ರದೊಳ್ ತರ್ಜನಿಯ ಚುಚ್ಚಿ, ನನ್ನ ಹೊಸ ಬಟ್ಟೆಯಂ ಹರಿದುಕೊಂಡು,

ಚಪ್ಪಲಾಂಗುಷ್ಟವಂ ಕಿತ್ತುಕೊಂಡು ಅಂತೂ ಕೊನೆಗೂ ಎರಡೂ ಕೈಗಳಲ್ಲಿ ಮೂರು ದೋಸೆಗಳ ತಟ್ಟೆಯ ಹಿಡಿದುಕೊಂಡು ಹೊರಗೆ ಬೀದಿಯವರೆಗೆ ತರುವಲ್ಲಿ ಸಫಲನಾದೆ.

ಆದರೆ ಅಕಟಾ! ನಾನು ದೋಸೆಗಳನ್ನು ಹೊರಗೆ ತರುತ್ತಿದ್ದಂತೆಯೇ ಪಕ್ಕದಲ್ಲಿಯೇ ನಿಂತಿದ್ದ ಮೂವರು ಬೃಹದಾಕಾರದ ಬಳಗಚ್ಚಿಣೀ, ತಮಿಳು ಪಾಟಿಗಳು ಒಬ್ಬೊಬ್ಬರೂ ಒಂದೊಂದು ತಟ್ಟೆಯನ್ನು ಕಿತ್ತುಕೊಂಡು ''ರುಂಬ ನಲ್ಲದ್ ಥ್ಯಾಂಕ್ಸ್, ಕೊಂಜ ತಣ್ಣಿಕೊಂಡುವಾ'' ಎನ್ನುತ್ತ ನಾ ತಂದ ದೋಸೆಗಳ ಮೇಲೆ ಹದ್ದೆರಗಿದರು.

ಇಷ್ಟು ದಿನ ಈ ತಮಿಳರು ಕನ್ನಡಿಗರ ಅನ್ನಕ್ಕೆ ಮಾತ್ರ ಕಲ್ಲು ಹಾಕುತ್ತಾರೆಂದು ಕೇಳಿದ್ದೆ. ಆದರೆ ಈಗ ಕನ್ನಡಿಗರ ದೋಸೆಗೂ ಬಾಯಿ ಹಾಕುತ್ತಾರೆಂದು ಅನುಭವದಿಂದ ಕಂಡುಕೊಂಡೆ. ಆದರೆ ವಿಶಾಲ ಹೃದಯದ ಕನ್ನಡಿಗನಾದ ನಾನು ಭಾವೈಕ್ಯತೆಯ ಉನ್ನತ ಧ್ಯೇಯ ಸಾಧನೆಗೋಸ್ಕರ ಈ ಅನ್ಯಾಯವನ್ನು ಹೇಗಾದರೂ ಮಾಡಿ ''ಅನುಸರಿಸಿಕೊಂಡೋ ಅಡ್ಜಸ್ಟ್ ಮಾಡಿಕೊಂಡೋ ಹೋಗುವುದನ್ನು'' ಬಿಟ್ಟು ಬೇರೇನೂ ಮಾಡಬಲ್ಲವನಾಗಿದ್ದೆ?

ಆದರೂ ದುಃಖ ತಡೆಯಲಾರದೇ, ಆ ದೇವ ದೇವನಲ್ಲಿ ಮೊರೆಯಿಟ್ಟೆ. (ಡಾ|| ರಾಜಕುಮಾರ್‌ರವರುಗಳ ಕ್ಷಮೆ ಕೋರಿ)

ನಾ ತಂದೆ ನೀ ತಿಂದೆ
ಇದು ನಿಮ್ಮ ಕಸುಬೆಂದೆ
ಬೇರೇನು ಕಾ ಕಾಣೆನು
ನನ್ನಯಾ ದೋಸೆಯನೆ ನಾ ಕಾಣೆನು ||ಪಲ್ಲವಿ||
ಹೊಗಳಿದರು ನೀನಿರುವೆ
ತೆಗಳಿದರು ನೀನಿರುವೆ
ಈ ನೆಲದಿ ಬೇರ್‌ಬಿಟ್ಟಿಹೆ
ಕರುನಾಡ ನೆಲದಲ್ಲಿ ತಳ ಊರಿದೆ||
ಆ ಪಾಟಿ ಈ ಪಾಟಿ
ನಿನಗಾರು ಸರಿಸಾಟಿ!
ಹೇಳೆನ್ನ ತಮಿಳಾಂಟಿಯೇ
ತ್ರಾಟಕಿಯೇ ನಿನಗಾರು ಪೇಳ್‌ಸಾಟಿಯೆ? ||
ನಾತಂದೆ ನೀ ತಿಂದೆ... ||

ಇರಲಿ. ಅಷ್ಟೊಂದು ಕಷ್ಟಪಟ್ಟು ದಿಗ್ವಿಜಯ ಸಾಧಿಸಿ ತಂದಂತಹ ದೋಸೆಗಳನ್ನು ಕಳಕೊಂಡ ನೋವು, ಹತಾಶತನ ಒಂದುಕಡೆ, ಸಾಲದೆಂಬಂತೆ ನನ್ನ ಹೆಂಡತಿ ''ಇಷ್ಟ ದಿವ್ಸ ಆಫೀಸಿನ್ಯಾಗ ಆ ಟ್ಯಾಪಿಷ್ಟ ಬೋಕಾಣಿಗೆ ಅಷ್ಟSS ದ್ವಾಸಿ ತಿನಸತೀರಿ ಅಂತ ತಿಳಿದಿದ್ದೆ... ಈಗ ಇದೊಂದು ಹೊಸಾ ನಾಟಕ ಸುರೂ ಆತ?... ಮಗಳು ಬೆಳೆದ ನಿಂತಾಳ ಅಂಬೋ ಖಬಾರ ಅರ ಅದS ಏನು ನಿಮಗ?'' ಎಂದು ಪಬ್ಲಿಕ್ಕಿನಲ್ಲಿಯೇ ತಿವಿದಿದ್ದಳು.

ಅಂತೂ ಅಂದು ಆ ಮೂವರು ಬ್ರಹದಾಕಾರಿಣೀ ಒಳಗಚ್ಚಿಣೀ ತ್ರಿಪಾಟಿಗಳಿಂದ ನನ್ನ ಮುಖಭಂಗ, ಧನಭಂಗ, ದೋಸಾಭಂಗ ಈ ರೀತಿ ನಾನಾ ಭಂಗಗಳಾದವು.

ಅದಕ್ಕೇ ಅದಕ್ಕೇSSS ನನಗೆ ಮೊದಲಿನಿಂದ ಈ ಒಳಗಚ್ಚಿಣಿಯರನ್ನು ಕಂಡರೆ ಅಷ್ಟಕ್ಕಷ್ಟೆ!

ಹಾಗೆ ನೋಡಿದರೆ ನಾನೂ ಕಚ್ಛ ಪ್ರದೇಶವನೇ. ನಮ್ಮ ಕಡೆಗೆ ನಿನ್ನ ಮೊನ್ನೆಯವರೆಗೆ ನಾವೆಲ್ಲ ಸ್ತ್ರೀ ಪುರುಷರೂ ಕಚ್ಚಿಗಳೇ ಆಗಿದ್ದೆವು. ಈಗಲೂ ಧಾರವಾಡ ಕಡೆ ಅನೇಕ ಹಿರಿಯರು ಕಚ್ಚೆ ಹಾಕಿ ಧೋತರವನ್ನೋ, ಒಂಭತ್ತು ವಾರೀ ಕಚ್ಚೆ ಸೀರೆಯನ್ನೋ ಉಡುತ್ತಾರೆ.

ಆದರೆ ಅವೆಲ್ಲ ಮುಗ್ಧ, open hearted, ಒಳಗೊಂದು ಹೊರಗೊಂದು ಇಲ್ಲದ frank, straight for ward ಸರಳ, ಸಿಂಪಲ್ ಕಚ್ಚೆಗಳು. ನಿಮ್ಮ ನೌವಾರೀ ಸೀರೆಯನ್ನೋ, ಧೋತರವನ್ನೋ ಕಲಾತ್ಮಕವಾಗಿ, ನೆರಿಗೆ ನೆರಿಗೆಯಾಗಿ ಹಿಡಿದು, ಗರಿಗರಿಯಾಗುವಂತೆ ತೀಡಿ ತೀಡಿ, ಕಚ್ಚೆಯ ಉದ್ದಕ್ಕೂ ಮಮತೆಯಿಂದ ಕೈಯಾಡಿಸಿ, ಸವರಿ, ಒಂದೇ ಸಮವಾದ ಉದ್ದನೆಯ ಪಟ್ಟಿಯಂತೆ ಹೊಂದಿಸಿ, ಸೊಂಟದ ಮುಂದೆಯೋ ಹಿಂದೆಯೋ ಸಿಕ್ಕಿಸಿಕೊಂಡು; ಕಚ್ಚೆ ಸರಿಯಾಗಿದೆಯೆಂದು ಖಾತ್ರಿ ಮಾಡಿಕೊಳ್ಳಲು ತುಸುವೇ ಕಾಲು ಮಡಿಸಿ ಬಾಗಿ ಆಮೇಲೆ ನೆಟ್ಟಗಾಗಿ ಮೇಲೆದ್ದು, ಬಲಗಾಲನ್ನು ಒಮ್ಮೆ ವರ್ತುಳಾಕಾರವಾಗಿ ಒಳಗೇ ತಿರುವಿಕೊಂಡು ಅದೇ ಬಲಗಾಲನ್ನು ಗಾಳಿಯಲ್ಲಿ ಕತ್ತೆ ಝಾಡಿಸಿದಂತೆ ಝಾಡಿಸಿಬಿಟ್ಟರೆ ನಿಮ್ಮ ಕಚ್ಚೆ ತಯಾರ್! ಯಾರೂ ನೋಡಬಹುದು.

ಆದರೆ ಈ ಒಳಗಚ್ಚೆಗಳ ಕತೆಯೇ ಬೇರೆ. ಇವುಗಳ ಬಗೆಯನ್ನು ಕಂಡವರಾರು? ಇವುಗಳ ಸ್ವರೂಪವಾಗಲೀ ಆಕಾರ ಆಕೃತಿಗಳಾಗಲೀ ಹೀಗೇS ಎಂದು ಯಾರು ಹೇಳಬಲ್ಲರು?

ಧಾರವಾಡದಲ್ಲೊಂದು ಗುಪ್ತಗಾಮಿನೀ ನದಿ, ಶಾಲ್ಮಲಾ ನದಿ ಎಂಬುದಿದೆಯಂತೆ. ಎಲ್ಲೋ ಹುಟ್ಟಿ ಎಲ್ಲೋ ದೊಡ್ಡದಾಗಿ ಕಲಘಟಗಿ ಊರಬಳಿ ನೆಲಬಿರಿದು ಸ್ವಲ್ಪ ದೂರ ಹರಿದಿದೆಯೆಂತೆ. ಎಲ್ಲಾ ಅಂತೆ ಕಂತೆಗಳ ಬೊಂತೆ. ಖರೇ ಅಂದ್ರ ಇಲ್ಲೀ ತನಕಾ ಯಾರೂ ಈ ನದಿ ನೋಡೇ ಇಲ್ಲ.

ಹಾಗೇ ಈ ಒಳಗಚ್ಚೆಗಳನ್ನು ಎಲ್ಲಿಂದ ಪ್ರಾರಂಭಿಸಿಬೇಕು? ಎಲ್ಲಿ ಮುಗಿಸಬೇಕು? ಮಧ್ಯಂತರ ಇವುಗಳ ರೂಪ ಸ್ವರೂಪಗಳೇನು? ಯಾವ ಕಾಲನ್ನು ಎತ್ತ ಕಡೆ ಘೂಡಿಸಬೇಕು ಇತ್ಯಾದಿ ವಿವರವಾದ ಮಾಹಿತಿ ನಿಮಗೆಲ್ಲೂ ದೊರೆಯದು. ಬಹುಶಃ ಇಂಟರ್‌ನೆಟ್‌ನಲ್ಲಿ ಕೂಡ ಸಿಕ್ಕಲಿಕ್ಕಿಲ್ಲ.

ನಾನು ಜೀವನದಲ್ಲಿ ಎಷ್ಟೋ ಗೋಮುಖ ವ್ಯಾಘ್ರಗಳನ್ನು ಕಂಡಿದ್ದೇನೆ. ಅವುಗಳ ಕೈಗೆ ಸಿಕ್ಕು ಪಡಬಾರದ ಪಾಡು ಪಟ್ಟಿದ್ದೇನೆ. ಮೋಸ ಹೋಗಿದ್ದೇನೆ.

ಖರೆ. ಆದರೆ ಈ ಗೋತಿಕ ವ್ಯಾಘ್ರಗಳ ಪರಿಯೇ ಬೇರೆ!

★★★

ಮುಗದೊಮ್ಮೆ, ನಾನು ಜಯನಗರದ ''ಖಾದ್ಯದರ್ಶಿನಿ'' ಹತ್ತಿರ ನಿಂತಾಗ ಇದ್ದಕ್ಕಿದ್ದಂತೆ ನನ್ನ ಬಲಗೈ ಮುಂಗೈ ಮೇಲೆ ಏನೋ ತುಸು ಜಿಡ್ಡು ಜಿಡ್ಡಾದ ದ್ರವರೂಪಿ ಪದಾರ್ಥ ಬಿದ್ದಂತಾಯಿತು. ನಾನು ಇದೇನು ಎಂದು ನೋಡಿಕೊಳ್ಳುವ ಮೊದಲೇ ಸುಮಾರು ಇಪ್ಪತ್ತೈದರ ತರುಣಿಯೊಬ್ಬಳು ಓಡೋಡಿ ಬಂದು ''ಅಂಕಲ್ ಸ್ವಲ್ಪ ಹಾಗೇ ನಿಂತಿರಿ'' ಎಂದು ನನ್ನ ಬಗ್ಗೈ ಮುಂಗೈಯನ್ನು ಲೊಚಲೊಚನೇ ನೆಕ್ಕತೊಡಗಿದಳು. ಆಗ ಪಕ್ಕದಲ್ಲೇ ನಿಂತಿದ್ದ ಅವಳ ಸ್ನೇಹಿತೆ'' ಇದೇನೇ... ಹೋಗಿ ಹೋಗಿ ಆ ಮುದುಕನ ಕೈಗೆ ಯಾಕೆ ಮುತ್ತು ಕೊಡ್ತಾ ಇದೀಯೇ?'' ಎಂದು ಕಿರುಚಿಕೊಂಡಳು.

ಅದಕ್ಕೆ ಈ ನೆಕ್ಕಿಣಿ, ''ಏನು ಮಾಡಲೇ? ಒಳಗಿನಿಂದ ಕಷ್ಟಪಟ್ಟು ಜಾಮೂನು ತಂದರೆ ರಸವೆಲ್ಲ ಈ ದರಿದ್ರ ಮುದುಕನ ಕೈಮೇಲೆ ಬಿದ್ದು ಬಿಟ್ಟಿತಲ್ಲೇ... ಥೂ... ಥೂ... ಉಪ್ಪುಪ್ಪು....'' ಎನ್ನುತ್ತ ತಾನು ಆರಂಭಿಸಿದ ಸತ್ಕಾರ್ಯವನ್ನು ಪೂರ್ತಿಗೊಳಿಸತೊಡಗಿದಳು.

ನನ್ನ ಮುಂಗೈ ನೆಕ್ಕುತ್ತಿದ್ದ ಹುಡುಗಿ ಕೇರಳದವಳು, ಯಾವದೋ ಒಂದು ಖಾಸಗೀ ನರ್ಸಿಂಗ್ ಹೋಮ್‌ನಲ್ಲಿ ನರ್ಸಮ್ಮ ಮತ್ತು ಅವಳ ಹೆಸರು ಥಂಕಮ್ಮ ಎಂದೇ ಇರಬೇಕು ಎಂದೆಲ್ಲ ನಾನು ಕ್ಷಣಾರ್ಧದಲ್ಲಿ ಊಹಿಸಿದೆ.

ಇದೇನ್ರೀ ಅದು ಹೇಗೆ ಅಷ್ಟರಲ್ಲಿ ಆ ಹುಡುಗಿ ಹೆಸರು, ಕುಲಗೋತ್ರ, ಊರು ಕೇರಿ ಉದ್ಯೋಗ ಇವುಗಳನ್ನೆಲ್ಲ ಹೇಗೆ ಖಚಿತವಾಗಿ ತಿಳಿದುಕೊಂಡಿರಿ'' ಎಂದು ಕೇಳುವಿರಾ? ಕೇಳಿ

ಹುಡುಗಿ ಬಾಯಿದಾಟಿ ಪೂರ್ತಿ ಹೊರಗೆ ಹಲ್ಲುಚಾಚಿದ ಉಬ್ಬಲ್ಲಿ. ಅವಳು ನೆಕ್ಕುವಾಗ ನನ್ನ ಮುಂಗೈಗೆಲ್ಲಾ ಬೆಕ್ಕು ಪರಚಿದಂತೆ ತರಚಿ ಗಾಯವಾಗಿ ಹೋಗಿತ್ತು (ಆಮೇಲೆ ನಾನು ಹದಿನಾಲ್ಕು ಇಂಜಕ್ಷನ್ ತೊಗೊಂಡಿದ್ದು ಬೇರೆ) ಅವಳು ಕೇರಳಿಣಿಯರ ಟ್ರೇಡ್‌ಮಾರ್ಕಿಗನುಗುಣವಾಗಿ ಬಿಚ್ಚು ಕೇಶಿಣಿ. ಅವಳ ನಿರ್ಬಂಧಿತ ಕೇಶರಾಶಿಯಿಂದ ಉಗ್ರವಾದ ಕೊಬ್ಬರಿ ಎಣ್ಣೆಯ ವಾಸನೆ ಮೂಗಿಗೆ ಅಡರುತ್ತಿತ್ತು.

ಅಲ್ಲದೇ ಅವಳ ಶುಭ್ರ ಶ್ವೇತ ಸೀರೆಯಿಂದ ಸ್ಪಿರಿಟ್ಟಿನ, ಡೆಟಾಲಿನ, ಇತರೇ ಕ್ರಿಮಿನಾಶಕಗಳ ವಾಸನೆ ಹೊಡೆಯುತ್ತಿತ್ತು. ಎಂದಮೇಲೆ ಅವಳು ನರ್ಸಮ್ಮ ಇರಲೇಬೇಕು. ಒಂದು ವೇಳೆ ಸರಕಾರೀ ಆಸ್ಪತ್ರೆಯ ನರ್ಸಮ್ಮನಾಗಿದ್ದರೆ ಉಡುಪು ಇಷ್ಟೊಂದು ಶುಭ್ರಶ್ವೇತವಾಗಿರುತ್ತಿರಲಿಲ್ಲ. ಎಂದಮೇಲೆ ಅವಳು ಯಾವದೋ ಒಂದು ದೊಡ್ಡ ದುಡ್ಡು ಬಾಚುವ ಖಾಸಗೀ ನರ್ಸಿಂಗ್ ಹೋಮಿನ ನರ್ಸಮ್ಮನೇ ಇರಬೇಕು. ಇದೆಲ್ಲ ಸರಿ. ಆದರೆ ಅವಳ ಹೆಸರು ಥಂಕಮ್ಮ ಎಂದು ಹೇಗೆ ಗ್ರಹಿಸಿದಿರಿ ಎಂದಿರಾ?

ಕೇರಳದ ನರ್ಸಮ್ಮನ ಹೆಸರು ಥಂಕಮ್ಮ ಎಂದಿರದೇ ಇನ್ನೇನು ವೆಂಕಮ್ಮ ಎಂದಿರುತ್ತದೆಯೇ?

ಎಲ್ಲಕ್ಕೂ ಹೆಚ್ಚಾಗಿ ಅವಳು ತನ್ನ ಮುಂಗೈಯನ್ನು ಲೊಚಲೊಚನೇ ನಕ್ಕದೇ ''ಳೊಜ ಳೊಜಣೇ ಣ್ಕೈಕ್ಕಿದ್ದಳು'' ಎಂದ ಮೇಲೆ ಆ ತಾಯಿ ಕೇರಳಾಂಬೆ ಇರಲೇಬೇಕೆಂಬುದು ಶತಸಿದ್ಧ. ಉಳಿದದ್ದೆಲ್ಲ Simple deductive logic.

★★★

ಪಾಠಕ ಮಹಾಶಯರೇ ಸೋದಾಹರಣೆಗಳಿಂದಲೂ, ಯಥೋಚಿತ ಕಥಾ ಪ್ರಸಂಗಗಳಿಂದಲೂ ಯುಕ್ತವಾದ ಈ ದರ್ಶನಾ ಪುರಾಣವನ್ನು ಯಾರು ಪ್ರತಿ ನಿತ್ಯ ತ್ರಿಕಾಲವೂ ಪಠಣ, ಶ್ರವಣ, ಕೀರ್ತನ ಮಾಡುವರೋ; ಅಥವ ದಿನಕ್ಕೊಮ್ಮೆಯಾದರೂ ತಿಂಗಳಿಗೊಮ್ಮೆಯಾದರೂ ಇಲ್ಲವೇ ಷಾಣ್ಮಾಶಿಕಕೊಮ್ಮೆಯಾದರೂ ಅಥವಾ ವರ್ಷಕ್ಕೊಮ್ಮೆ ಅದೂ ಇಲ್ಲದಿದ್ದರೆ ಜನುಮದಲ್ಲಿ ಒಂದು ಸಲವಾದರು ಪಠಣ ಶ್ರವಣ ಕೀರ್ತನ ಮಾಡುವರೋ, ಅವರ ದುಃಖ, ದಾರಿದ್ರ್ಯ, ದುಗುಡ, ದುಮ್ಮಾನಗಳೆಲ್ಲ ಕಳೆದು, ಅವರು ಧನ, ಕನಕ, ಗೋ, ಭೂ, ಸುವರ್ಣ, ವಸ್ತ್ರ, ಪುತ್ರ, ಪಾತ್ರ ತಳತ್ರಾದಿಯಾಗಿ ಸಕಲ ಸುಖವನ್ನು ಅನುಭೋಗಿಸಿ, ಈ ಲೋಕದ ವ್ಯಾಪಾರಂಗಳ ಮುಗಿಸಿ, ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಿ ವೈಕುಂಠದಲ್ಲಿಯೂ ಕೂಡ ದರ್ಶನವಾಶಿಗಳಾಗಿ ದೋಸೈಕ್ಯರಾಗಿ ಬಿಡುವರು. ಇದರಲ್ಲಿ ಸಂದೇಹವಿಲ್ಲ.

ಇತಿಶ್ರೀ ತಿನ್ನಾಸಕ ಪುರಾಣೇ ರೇವಾಖಂಡೇ ಅಂತಿಮೋಧ್ಯಾಯಃ ಸಮಾಪ್ತಃ

ಶುಭಮಸ್ತು

(ಲೇಖಕರು ದೋಸಾ ಸಮಾಧಿಯಲ್ಲಿದ್ದಾಗ ಬರೆದ ಲೇಖನವಿದು. ಹಾಗಾಗಿ ಲೇಖಕರೂ ಸೇರಿದಂತೆ ಯಾರೂ ಈ ಲೇಖನಕ್ಕೆ ಜವಾಬ್ದಾರರಲ್ಲ!

- ಸಂಪಾದಕ)

ಮೆಘಾ ಸಮಸ್ಯೆಗಳು

- ಕೃಷ್ಣ ಸುಬ್ಬರಾವ್

ನಮ್ಮಾಕೆ ಈಚೆಗೆ ಬಹಳ ಬಿಸಿ (Busy) ನಮ್ಮ ಮನೆಯ ಕೆಲಸ ಹಾಗೂ ಸಮಸ್ಯೆಗಳನ್ನು ಮಾತ್ರ ನಿಭಾಯಿಸುವ ಸ್ವಾರ್ಥಿಯಾಗಿ ಉಳಿದಿಲ್ಲ. ಸಾಮಾನ್ಯ ಜನರ ಸಮಸ್ಯೆಗಳನ್ನು ತನ್ನದೆಂದೇ ಭಾವಿಸಿ ಅದಕ್ಕೆ ಸ್ಪಂದಿಸಿ, ಅನೇಕ ಸಲಹೆ, ಸೂಚನೆಗಳನ್ನು ಕೊಡುತ್ತಾ, ಜೀವನದ ಓಟವನ್ನು ಓಟದ ಗತಿಯನ್ನು ದಿಕ್ಕನ್ನು ಬದಲಾಯಿಸಲು ಸತತವಾಗಿ ದುಡಿಯುವಾಕೆ! ಇಂತಹ ಸಮಯದಲ್ಲಿ ಸಂಸಾರವೆಂಬ ಸಮರದಲ್ಲಿ ಮನೆ ಮಂದಿ ದಿಕ್ಕಾಪಾಲು ಅನಿವಾರ್ಯ, ದಿಕ್ಕಾಪಾಲು ಅಂದರೆ ಬೆಳಿಗ್ಗೆ ತಿಂಡಿಗೆ, ಮಧ್ಯಾನ್ಹದ ಕಾಫಿಗೆ ಸಂಜೆ ತಿಂಡಿಗೆ ಅಲ್ಲಲ್ಲಿ ಪ್ರಸಿದ್ಧವಾಗಿರುವ ದರ್ಶನಿಗಳನರಸಿ ಹೋಗಬೇಕಾಗುವ ಸಂದರ್ಭ ಬರುತ್ತೆ. ನಾನು ನನ್ನ ಮಗ, ನನ್ನ ಮಗಳು ಈ ವ್ಯವಸ್ಥೆಯನ್ನು ಸುತಾರಾಂ ಗೊಣಗದೆ ಒಪ್ಪಿಕೊಂಡು ಜೀವನ ನಡೆಸುತ್ತಿದ್ದೇವೆ. ಇತ್ತೀಚಿನ ಮಾಹಿತಿ ಪ್ರಕಾರ ನಾವು ಮೂವರು ನಮ್ಮ ನಮ್ಮ ತೂಕವನ್ನು ಸರಾಸರಿ 5 ಕೆ.ಜಿ. ಜಾಸ್ತಿ ಮಾಡಿಕೊಂಡಿದ್ದೇವೆ.

ಅಂದಹಾಗೆ ಓದುಗರ ಕುತೂಹಲ ಸುಮ್ಮ ಸುಮ್ಮನೆ ಜಾಸ್ತಿ ಮಾಡುವುದು ಆರೋಗ್ಯಕರವಲ್ಲ, ನನ್ನ ಹೆಂಡ್ತಿ ದೊಡ್ಡ ಸಮಾಜ ಸುಧಾರಕಳು, ತನ್ನ ಮನೆಯನ್ನು, ಮನೆಯವರನ್ನು ಅಸಡ್ಡೆಮಾಡಿ ಬೇರೆ ಮನೆಯವರ ಒಳ್ಳೆಯದಕ್ಕಾಗಿ ಓಡಾಡುವಳು, ಅಂತಹ ಕಾರ್ಯಗಳು ಯಾವುವು? ಅಂತ ಇಲ್ಲದ ಊಹೆಗಳನ್ನು ಮಾಡಬೇಡಿ. ದೂರದರ್ಶನದಲ್ಲಿ ಬರುವ ಅನೇಕನೇಕ ಧಾರವಾಹಿಗಳನ್ನು ಕಣ್ಣು ಮಿಟುಕಿಸದೆ ನೋಡುವುದು, ಅಲ್ಲಿ ಬರುವ ಕಥಾನಕದ ನಾಯಕ, ನಾಯಕಿ, ಅವರ ತಂದೆ ತಾಯಿ ಅತ್ತೆ ಮಾವರ ಕಷ್ಟಗಳೊಂದಿಗೆ ಸ್ಪಂದಿಸುವುದು, ಗೆಳತಿಯರೊಡನೆ ಚರ್ಚಿಸುವುದು ದಿನನಿತ್ಯ ಕಾರ್ಯಕ್ರಮವಾಗಿತ್ತು. ಆಗ ನಮ್ಮಾಕೆ ಮನೆಯೊಳಗೆ, ತಪ್ಪಿದರೆ ಮನೆಯ ಕಾಂಪೌಂಡ್ ಹತ್ತಿರ ಕಾಣಸಿಗುತ್ತಿದ್ದಳು. ದೂರವೆಂದರೆ ಮನೆಯ ಹತ್ತಿರದಲ್ಲಿರುವ ಅವಳ ಸಮಾಜದ ಕೇಂದ್ರ, ಕಛೇರಿಯಲ್ಲಿ ಸಿಗುತ್ತಿದ್ದಳು. ಆದರೆ ಈಗ ಅವಳ ಚಟುವಟಿಕೆ ವಿಸ್ತಾರಗೊಂಡಿದೆ. ಜನಪ್ರಿಯ ಧಾರವಾಹಿಗಳ ನಿರ್ಮಾಪಕರು ಮುಖಾಮುಖಿ ಕಾರ್ಯಕ್ರಮ ಹಮ್ಮಿಕೊಂಡು ಪ್ರಿಯವೀಕ್ಷಕರೊಡನೆ ವಿಚಾರ ವಿನಿಮಯ ಮಾಡಿಕೊಂಡು ಮತ್ತಷ್ಟು ಕಂತುಗಳನ್ನು ಡೈರೆಕ್ಟರ್ ಮನದಲ್ಲೇ ಹೆಣೆದುಕೊಂಡರಂತೆ. ಕಲಾವಿದರ ಕಿರುತೆರೆಯ ಫ್ಯಾಮಿಲಿ ಪ್ರಾಬ್ಲಮ್ಸ್‌ನ ಜೊತೆಗೆ ಅವರ ವೈಯಕ್ತಿಕ ವಿಚಾರಗಳನ್ನು ಆಹ್ವಾನಿಕರು ಕೆಣಕಿದರಂತೆ. ಏನೇನು ಪ್ರಶ್ನೆಗಳನ್ನು ಕೇಳಬೇಕೆಂಬ ವಿಚಾರದಲ್ಲಿ ನಮ್ಮಾಕೆ ಕಳೆದುಕೊಂಡ ನೆಮ್ಮದಿಯನ್ನು

ನೋಡಿದರೆ ಧಾರವಾಹಿಗಳಿಗೆ ಸಾಕಷ್ಟು ಭವಿಷ್ಯವಿದೆ ಬರಗಾಲವಿಲ್ಲ ಎಂಬುದು ಖಂಡಿತ. 'ನಿಶಕ್ತಿ' ಎಂಬ ಜನಪ್ರಿಯ ಧಾರವಾಹಿಗಳ ಬಗ್ಗೆ ಈಚೀಚೆಗೆ ಬಹಳ ಜನ ರಕ್ತದ ಒತ್ತಡ ಹೆಚ್ಚಿಸಿಕೊಂಡಿದ್ದಾರೆ, ತಲೆ ಕೆಡಿಸಿಕೊಂಡಿದ್ದಾರಂತೆ. ಆದರ ಮೆಘಾ ಸಮಸ್ಯೆಗಳ ಬಗ್ಗೆ ನಿರ್ಮಾಪಕ, ನಿರ್ದೇಶಕರೇ ಅಷ್ಟು ತಲೆ ಕೆಡಿಸಿಕೊಂಡಿಲ್ಲವಂತೆ. ಕಲಾವಿದರು ಒಬ್ಬೊಬ್ಬರಾಗಿ ಒಮ್ಮೊಮ್ಮೆ ಒಟ್ಟೊಟ್ಟಾಗಿ ವಾಕೌಟ್ ಮಾಡುತ್ತಿದ್ದರೂ ಬೇರೆ ಬೇರೆ ಕಲಾವಿದರನ್ನು ಹಾಕಿಕೊಂಡು ಕಥೆಯನ್ನು ಮುಂದುವರಿಸುತ್ತಿದ್ದಾರೆ. ಕಲಾವಿದರು ಶಾಶ್ವತವಲ್ಲ ಕಥೆ ಶಾಶ್ವತ, ಧಾರವಾಹಿ ಶಾಶ್ವತ ಎನ್ನುವ ಸತ್ಯಾಂಶವನ್ನು ಸಾರುತ್ತಿದ್ದಾರೆ. ಕಥೆಯಲ್ಲಿ ಸಾಧಾರಣವಾಗಿ ಕೆಲಸಕ್ಕೆ ಬಾರದ ಕಲಾವಿದ ಜೋರು ಮಾಡಿದರೆ, ಕಾಯಿಲೆ ಬಿದ್ದರೆ, ವಿದೇಶಕ್ಕೆ ಹೋದರೆ ಅಥವಾ ಇನ್ನೇನಾದರು ಆದರೆ ನಿರ್ಮಾಪಕ, ನಿರ್ದೇಶಕರು ಕಥೆಯಿಂದ ಆ ಕ್ಯಾರಕ್ಟರನ್ನು ಮನೆಬಿಟ್ಟು ಹೋದಂತೆ ಅಥವಾ ಆಕ್ಸಿಡೆಂಟ್‌ನಲ್ಲಿ ಸತ್ತಂತೆ ವಿವರಣೆಯಲ್ಲೆ ಮುಗಿಸಿಬಿಡ್ತಾರೆ. ಆದರೆ ಮುಖ್ಯ ಪಾತ್ರಗಳ ಕಲಾವಿದರು ಹಾಗೂ ಮೂವರಿಗಿಂತ ಹೆಚ್ಚು ಕಲಾವಿದರು ಯಾವುದೋ ಕಾರಣಕ್ಕಾಗಿ ಜೋರುಮಾಡಿ ಕಿರುತೆರೆಯಿಂದ ಹೊರಗೆ ಬಂದರೆ ಏನು ಮಾಡುವುದು? ಈಗ ಉಪಾಯ ಸುಲಭವಾಗಿದೆ. ಇನ್ನೊಂದು ಕಲಾವಿದರನ್ನು ಸೇರಿಸಿಕೊಳ್ಳುವುದು ಇದಕ್ಕೆ ಜನರು ಒಗ್ಗುತ್ತಾ ಬರುತ್ತಿರುವುದು ಆರೋಗ್ಯಕರವಾದ ಬೆಳವಣಿಗೆ. ಈ ರೀತಿ ವ್ಯವಸ್ಥೆ ನಮ್ಮ ಕನ್ನಡ ನಾಡಿನ ಹಿರಿಮೆಯೆ? ಅಥವಾ ಈ ಉಪಾಯವೇದಾಂತವನ್ನು ಬೇರೆ ಭಾಷೆಯಿಂದ ಕದ್ದಿದ್ದೇವೋ ಎಂಬ ಪ್ರಶ್ನೆಯನ್ನು ಮುಂದಿನ ಮುಖಾಮುಖಿ ಕಾರ್ಯಕ್ರಮದಲ್ಲಿ ಕೇಳಲು ನನ್ನವಳಿಗೆ ಹೇಳಿದ್ದೇನೆ.

ಒಂದು ಅತ್ಯಂತ ಜನಪ್ರಿಯ ಧಾರವಾಹಿಯಲ್ಲಿ ಈಗಾಗಲೆ 1325 ಜನ ಪಾತ್ರವಹಿಸಿ ಗಿನ್ನಿಸ್ ದಾಖಲೆಯತ್ತ ನಡೆಯುತ್ತಿದೆಯಂತೆ. ಡೈರಕ್ಟರನ್ನು ಯಾರಾದರೂ ನಿಮಗೆ ಪರಿಚಯಿಸಿದ್ರೇ ಆದರೆ ಅವರು ''ನೀವ್ಯಾಕೆ ನಮ್ಮ ಸೀರಿಯಲ್‌ನಲ್ಲಿ ಒಂದು ಬಹಳ ಚಿಕ್ಕ ಆದರೆ ಮುಖ್ಯ ಪಾತ್ರ ಮಾಡಬಾರದು'' ಅಂತ ಆಹ್ವಾನಿಸಿ ಮರುದಿನವೇ ಅವರಿಗೊಂದು ಛಾನ್ಸ್ ಕೊಡಿಸುತ್ತಾರಂತೆ. ನಿಂತಲ್ಲೇ ಪಾತ್ರಸೃಷ್ಟಿ. ನಿರ್ಮಾಪಕರು ಅದಕ್ಕೆ ಅಡ್ಡಿ ಬರೊಲ್ಲ (ಅವರ ಹೆಂಡತಿಯಾದರೂ ಸಹ) ಏಕೆಂದರೆ ಇದುವರೆಗೂ ಯಾವ ಕಲಾವಿದರಿಗೂ 'ಸಂಭಾವನೆ' ಎಂಬ ಕ್ಷುಲ್ಲಕ ವಿಚಾರಗಳಿಗೆ ಸಮಯ ಹಾಗೂ ಹಣ ಹಾಳು ಮಾಡುವುದಿಲ್ಲವಂತೆ. ಅವರ ಬಗ್ಗೆ ಒಂದು ಪ್ರಚಲಿತ ಜೋಕ್ ಇದೆ. ಇತ್ತೀಚೆಗೆ ಅವರು ಎಷ್ಟು ಕನ್‌ಫ್ಯೂಸ್ ಆಗಿದ್ದರೆಂದರೆ ಒಬ್ಬ ವ್ಯಕ್ತಿ ಬಂದಾಗ ''ನೀವು ಯಾರ್ರಿ?'' ಅಂತ ಕೇಳಿದರಂತೆ. ಅವರ ಸಹ ನಿರ್ದೇಶಕರಿಗೂ ಗುರುತು ಸಿಗಲಿಲ್ಲ. ಆಗ ವ್ಯಕ್ತಿ ''ಸಾರ್, ಏನ್‌ಸಾರ್ ನಾನು ನಿಮ್ಮ ಧಾರವಾಹಿಯ 126ನೇ ಎಪಿಸೋಡ್‌ನಲ್ಲಿ ಸ್ವಾಮಿ ಪಾತ್ರವಹಿಸಿದೆನಲ್ಲ ನೀವೆ ನನ್ನನ್ನಿ ಆಹ್ವಾನಿಸಿ....'' ಎಂದು ಹೇಳಿಕೊಂಡು ತಮ್ಮ Bio-data ಕೊಟ್ಟರಂತೆ.

"ಇರಬಹುದು ರಿ, ನಮಗೆ ಅದೆಲ್ಲ ಜ್ಞಾಪಕ ಇರೊದಿಲ್ಲ ನಮಗೇನಿದ್ದರೂ ಮುಂದಿನ ಎಪಿಸೋಡ್ ಬಗ್ಗೆ ಯೋಚನೆ. ಅಂದ ಹಾಗೆ ನೀವು ಏಕೆ ಬಂದಿದ್ದು?" ಕೇಳಿದರಂತೆ.

"ಅಲ್ಲಾ ಸಾರ್ ಸಂಭಾವನೆ..."

"ಸೀರಿಯಲ್ ಜನರಿಗೋಸ್ಕರ ಮಾಡುತ್ತಿದ್ದೇವೆ. ಲಾಸ್‌ನಲ್ಲಿ ನಡೆಸುತ್ತಿದ್ದೇವೆ. ಬೇಕಾದರೆ ಸಂಭಾವನೆ ಬದಲು ನಿಮಗೆ ಪಾತ್ರಮಾಡಲು ನಿಮ್ಮ ಕ್ಯಾರಕ್ಟರ್ ರಿಪೀಟ್ ಮಾಡು ಅವಕಾಶ ಕೊಡ್ತೀನಿ" ಅಂತ Tempting offer ನೀಡಿದರಂತೆ. ಜಗಳ ಕಾಯಲು ಬಂದ ಕಲಾವಿದ ತಬ್ಬಿಬ್ಬಾಗಿ ಕಡೆಗೆ ಮೇಕಪ್‌ಗೆ ಸಿದ್ಧನಾದನಂತೆ

ಜೈ ಮೆಘಾ ಸೀರಿಯಲ್!

ವರ್ಲ್ಡ್‌ಕಪ್ ಗಾದೆಗಳು

– ವಾಣೀ ಸುರೇಶ್

- ದ್ರಾವಿಡ್ ಸೌರವ್ ಸಂಭ್ರಮದಲ್ಲಿ ಶ್ರೀಲಂಕಾ ಬಡವಾಯ್ತಂತೆ
- ಟಾಸಿನಾಸೆಗೆ ಗೂಸಾ ತಿಂದಂತೆ
- ಸೌರವ್ ಬೀಸಾಟಕ್ಕೆ ರಾಹುಲ್ ಸಾಕ್ಷಿ
- ದಂಡಿಗೆ ಹೆದರಲಿಲ್ಲ, ಧಾಳಿಗೆ ಹೆದರಲಿಲ್ಲ, ಮೊಹಂತನ
ಬೋಲಿಂಗಿಗೆ ಹೆದರಿದ ಹಾಗೆ
- ಹೊಸಾ ಬೋಲರ್‌ಗಿಂತ ಹಳೇ ಬ್ಯಾಟ್ಸ್‌ಮನ್ನೇ ವಾಶಿ
- ಗೆದ್ದೋರು ಗೆಣಸು ತಿಂದ್ರಂತೆ
ಸೋತೋರು ಸೂಪರ್ ಸಿಕ್ಸ್‌ಗೆ ಹೋದ್ರಂತೆ
- ಬಾಯ್ಕಾಟ್ ಪೂರ್ ಪೂರ್ ಅಂದ್ರೆ
ಗಾಯಕ್ವಾಡ್ ಷೂರ್ ಷೂರ್ ಅಂದ್ನಂತೆ
- ತುಂಗಂಗೆ ಬಂತು, ಥಾರ್ಪ್‌ಗೆ ಬಂತು
ಅಲೆಕ್ ಸ್ಟೂವರ್ಟನ ಕುತ್ತಿಗೇಗೆ ಬಂತು
- ಅಕ್ರಂ ಗೆ ವಿಕ್ರಮದ ಚಿಂತೆ
ವಾ ಗೆ ವರ್ಲ್ಡ್‌ಕಪ್ ಚಿಂತೆ

ರಾ. ಶಿ. ಯವರ ಅಪ್ರಕಟಿತ ಬರಹಗಳ ರಾಶಿಯಿಂದ...

"ವ್ಯಂಗ್ಯ ಮತ್ತು ವಕ್ರೋಕ್ತಿ"

- ರಾ. ಶಿ.

ಹಾಸ್ಯದ ವಿವಿಧ ಮುಖಗಳು ಮನುಷ್ಯರ ಮುಖಗಳಂತೆಯೇ ನಾನಾ ತರಹ ಬೇರೆ ಬೇರೆ ವಿಧವಾದುವು.

ಕೆಲವು ಮುಖಗಳು ದುಂಡಾಗಿ ಮುದ್ದಾಗಿ, ಮುದ್ದು ಮುದ್ದೆಯಾಗಿ, ಬರೀ ಬೆಣ್ಣೆ ಬಿಸ್ಕತ್ತನ್ನೇ ತಿಂದು ತೇಗಿದುದನ್ನು ಸೂಚಿಸುತ್ತವೆ. ಅದೇ ರೀತಿ ಹೊಟ್ಟೆ ತುಂಬಿದವರು, ಸುಖದಿಂದಿರುವವರು ಮಾಡುವ ಹಾಸ್ಯ, ಹಾಗೂ ಮೆಚ್ಚುವ ಹಾಸ್ಯ, ಪರಿಹಾಸ ಮತ್ತು ಹುಚ್ಚು ಹಾಸ್ಯ.

ಇನ್ನು ಕೆಲವು ಮುಖಗಳು ಕತ್ತಿಯ ಅಲುಗಿನಂತೆ ತೀಕ್ಷ್ಣವಾಗಿ ಕೋರಾಗಿರುತ್ತವೆಯಲ್ಲವೇ? ಒಂದು ಪಕ್ಕದಿಂದ ನೋಡಿದರೆ ಆ ಮೂಗಿನ ಮಾಟ, ಕೆನ್ನೆಲುಬುಗಳ ನೇರತೆ, ಗಲ್ಲದ ತೀಕ್ಷ್ಣತೆ, ಇವೆಲ್ಲವೂ ಹರಿತವಾಗಿಯೇ ಕಾಣುತ್ತವೆ. ಮೂಗಿನ ತುದಿ ಬಾಣದ ತುದಿಯಂತೆ ಮೊನಚಾಗಿ ಕಾಣುತ್ತದೆ.

ಹೊಟ್ಟೆಗೆ ಸಾಲದೆ ಹೊಟ್ಟೆ ಉರಿಯುತ್ತಿದ್ದವರು, ತಮಗೆ ಸಿಕ್ಕಿದುದರಲ್ಲಿ ತೃಪ್ತಿಗೊಳ್ಳದೆ ರೋಷಗೊಂಡವರೂ ಮಾಡುವ ಹಾಸ್ಯ, ಅಥವಾ ಮೆಚ್ಚುವ ಹಾಸ್ಯ ವ್ಯಂಗ್ಯ ಮತ್ತು ವಕ್ರೋಕ್ತಿಯ ಸ್ವರೂಪದವು.

ಇನ್ನೂ ಕೆಲವು ಮುಖಗಳು ಬಲು ಅಂದವಾಗಿರುತ್ತವೆ. ಅಷ್ಟು ದುಂಡೂ ಅಲ್ಲ ಅಷ್ಟು ಮೊನಚೂ ಅಲ್ಲ. ಮೂಗಿನ ತುದಿ ಮೊನಚಾಗಿದ್ದಿರಬಹುದು ಆದರೆ ಗಲ್ಲ ಗುಂಡಾಗಿದ್ದು ಗುಳಿ ಬೀಳುತ್ತೆ. ಕೆನ್ನೆಲುಬುಗಳು ಎದ್ದು ಇದ್ದರೂ ಕೆನ್ನೆಗಳು ನಕ್ಕಾಗ ಗುಳಿ ಬೀಳುತ್ತವೆ.

ಹೊಟ್ಟೆಗೆ ಸಾಕಷ್ಟು ಸಿಕ್ಕಿ, ಸಿಕ್ಕಿದುದರಲ್ಲಿ ಸಾಕಷ್ಟು ಸುಖ ಪಡುವ ಈ ಜಾತಿಯವರಿಗೆ, ನೆರೆಯವರಿಗೆ ದೊರೆತಿದ್ದೆಲ್ಲಾ ದುಃಖ ಕಾರಕವಾಗುತ್ತದೆ. ಇಂತಹವರಿಗೆ ಕುಚೇಷ್ಟೆ ಮತ್ತು ವಿಕಟ ಹಾಸ್ಯವನ್ನು ಕಂಡರೆ ಬಲು ಅಕ್ಕರೆ.

ಮತ್ತೊಂದು ಬಗೆಯ ಮುಖಗಳಲ್ಲಿ ಕಣ್ಣೊಂದೇ ಪ್ರಧಾನವಾಗಿ ಕಾಣುತ್ತದೆ. ಆ ಕಣ್ಣುಗಳ ಹೊಳಪು ಮುಖವನ್ನೆಲ್ಲಾ ಕಾಂತಿಯುತವಾಗಿ ಬೆಳಗಿರುತ್ತದೆ. ಕಂಡವರ ಮುಖ ಕೋರೈಸುವಂತಾಗುತ್ತದೆ.

ಹೊಟ್ಟೆಗೆ ಇದ್ದರೂ ಆಯಿತು, ಇಲ್ಲದಿದ್ದರೂ ಹೋಯಿತು. ಜೀವನದಲ್ಲಿ ಹೊಟ್ಟೆಯಲ್ಲಾ ಮುಖ್ಯ ಆ ಕ್ಷಣದಲ್ಲಿ ಅನುಭವಿಸುವ ಸೊಗಸೇ ಜೀವನದಲ್ಲಿನ ಸೊಬಗು ಎಂದೆನ್ನುವ ಇಂತಹವರಿಗೆ ಚತುರೋಕ್ತಿಯೇ ಬಲು ಪ್ರಿಯ. ಅಂದಮೇಲೆ ವ್ಯಂಗ್ಯ ಮತ್ತು ವಕ್ರೋಕ್ತಿಗಳಿಗೆ ತೀಕ್ಷ್ಣತೆ ಹೆಚ್ಚು ಬಿರುಸು ಕೂಡ ಉಂಟು. ಈ ತೆರನಾದ ಹಾಸ್ಯಕ್ಕೆ ಬಲಿಯಾದವರು ನೋವುಗೊಳ್ಳುವುದು ಸ್ವಾಭಾವಿಕವೇ ಅಲ್ಲವೇ!

ಹಳೆ ಕಾಲದ ಅತ್ತೆ ಸೊಸೆಯೊಡನೆ ಮಾತನಾಡುವಾಗ ಆಗಾಗ್ಗೆ ವ್ಯಂಗ್ಯವಾಗಿಯೇ ಮಾತನಾಡುತ್ತಿದ್ದಳು. ಏಕೆ! ತನ್ನ ಮಗನ ವಿಶ್ವಾಸಕ್ಕೆ ಈ ಹುಡುಗಿ ಸೊಸೆಯೊಬ್ಬಳು ಪಾಲುದಾರಿಕೆಗೆ ಬಂದಳಲ್ಲಾ ಎನ್ನುವ ಅಗೋಚರ ಕರುಬಿನಿಂದ.

ಸೊಸೆ ದೋಸೆ ಹಿಟ್ಟನ್ನು ಸಾವಧಾನಿಗೆ ರುಬ್ಬುತ್ತಾ ಸಣ್ಣ ದನಿಯಲ್ಲಿ ಏನೋ ಹಾಡು ಪಲಕುತ್ತಿದ್ದಾಳೆ ಅತ್ತೆ ಬರುತ್ತಾಳೆ. ನೋಡುತ್ತಾಳೆ. ಕೇಳುತ್ತಾಳೆ. ಕಣ್ಣು ಬಿಟ್ಟು ಪ್ರಾಯದ ಸೊಸೆಯನ್ನು ನೋಡುತ್ತಾಳೆ. ಕಿವಿಗೊಟ್ಟು ಪಲುಕುತ್ತಿರುವ ಹಾಡನ್ನು ಕೇಳುತ್ತಾಳೆ. ಅಗೋಚರ ಅವ್ಯಕ್ತ ಕರುಬು ಅವಳ ಬಾಯಲ್ಲಿ ಈ ಮಾತನ್ನು ಆಡಿಸುತ್ತೆ. ''ಏನೇ! ಹಾಡ್ತಾ ಇದಿ! ನಿನ್ನ ದನಿ ಕೇಳಿ ತಲೆಯಾಡಿಸುತ್ತಾ ಸುತ್ತು ತಿರುಗಲು ನಿನ್ನ ಗಂಡ ಅಂತ ತಿಳಿದುಕೊಂಡೆಯೇನೇ, ಆ ಗುಂಡಕಲ್ಲನ್ನು, ಹಾಡು ನಿಲ್ಲಿಸಿ ತೋಳು ಎಬ್ಬಿಸಿ ತಿರುವು'' ಎಂದನ್ನುತ್ತಾಳೆ.

ನಿನ್ನೆದುರಿಗೆ ನಿನ್ನ ಗಂಡ ಗುಂಡಕಲ್ಲಿನಂತೆ ತಲೆಯಿಲ್ಲದವನಾಗುತ್ತಾನೆ ನೀನು ಹೇಳಿದ ಹಾಗೆ ಕುಣಿಯುತ್ತಾನೆ ಎಂದೆಂಬ ಅರ್ಥವು ಸ್ಪಷ್ಟವಾಗಿದೆ ಹಾಗೂ ದೋಸೆ ಹಿಟ್ಟು ರುಬ್ಬುವುದಕ್ಕೆ ನಿನ್ನ ವೇಗ ಬಲು ಮಂದ ಎಂದೂ ಹೇಳುವ ಅರ್ಥವೂ ಸ್ಪಷ್ಟವಾಗಿದೆ.

ಮಗ ಬರುತ್ತಾನೆ. ಬರೋಹೊತ್ತಿಗೆ ತಾಯಿ ಮನೆ ಗುಡಿಸುತ್ತಾ ಇರುತ್ತಾಳೆ. ಯಾಕಮ್ಮಾ ಸರೋಜನಿಗೆ ಹೇಳಬಾರದಿತ್ತೇ, ನೀನೇ ದುಡಿಯಬೇಕೇ? ಎಂದೆನ್ನುತ್ತಾನೆ.

ಅಕೆ ಮರುತ್ತರ ಕೊಡುತ್ತಾಳೆ ''ಸರಿ! ಬಿಡಪ್ಪಾ ರಾಮು ನಿನ್ನ ಹೆಂಡತಿ ಕೈಲಿ ಈ ಕೆಲಸ ಮಾಡಿಸಿದರೆ - ಯಾರ ಕೈಲೋ ಜೋಳ ಕುಟ್ಟಿಸಿದ ಹಾಗೇನೇ!'' ಎಂದು.

''ಸೂಳೆ ಕೈಲಿ ಜೋಳ ಕುಟ್ಟಿಸಿದ ಹಾಗೆ'' ಎಂಬ ಗಾದೆ ಇದಕ್ಕೆ ಹಿನ್ನೆಲೆ. ನಿನ್ನ ಹೆಂಡತಿ ಮನೆಗೆಲಸ ಮಾಡಲು ಶುದ್ಧ ಅಪ್ರಯೋಜಕ. ವ್ಯಂಗ್ಯಕ್ಕೆ ಅಥವಾ ಕಟಕಿಗೆ ಅಥವಾ ಕುಹಕಿಡಿಗಳಿಗೆ ಗಾದೆಗಳು ಸ್ವತಃಸಿದ್ಧವಾಗಿದೆ. ಅದೇ ರೀತಿ ನವೀನ ಸೊಸೆ ಅತ್ತೆಯನ್ನು ಮಾತನಾಡಿಸುವಾಗ ವ್ಯಂಗ್ಯವಾಗಿಯೇ ಮಾತನಾಡುತ್ತಾಳೆ. ಅವಳಿಗೂ ಕರುಬು. ಅವ್ಯಕ್ತ ಅಗೋಚರವಾದ ಕರುಬು - ಅತ್ತೆ ಮಾತು ಕೇಳಿಕೊಂಡು ಮಗ ತಾನು ಹೇಳಿದ್ದನ್ನು ಮಾಡೋದಿಲ್ಲವಲ್ಲಾ ಅಂತ -

ಅತ್ತೆ ಬೆಳ್ಳಿ ಪಾತ್ರೆಗಳನ್ನು ತೊಳೆಯುತ್ತಿದ್ದಾಳೆ. ಅಕಸ್ಮಾತ್ ಜಾರಿಬಿತ್ತು ಒಂದು ಲೋಟ. ಮುಕ್ಕುಮುಗ್ಗಲಾಯಿತು. ''ಅಯ್ಯೋ!'' ಅನ್ನುತ್ತಾಳೆ ಅತ್ತೆ ಸ್ವಾಭಾವಿಕವಾಗಿ.

ಸೊಸೆ ಹೇಳುತ್ತಾಳೆ ''ಬಿಡೀಮ್ಮಾ! ಆ ಪಾತ್ರೆಗೆ ಬೆಲೆಯೇ ಇಲ್ಲ. ನಮ್ಮಪ್ಪ ಕೊಟ್ಟಿದ್ದು ಅದು ಮದುವೇಲಿ'' ಅಂತ ಸೊಸೆಯ ತೌರುಮನೇಲಿ ಏನು ಕೊಟ್ಟರು ಅದು ಅಲ್ಪ ಎಂದು ಅತ್ತೆ ಗೊಣಗಬಹುದು ಅದನ್ನೂ ಅಂದಹಾಗಾಯಿತು. ''ಅತ್ತೆಯೊಡೆದ ಪಾತ್ರೆಗೆ ಬೆಲೆ ಇಲ್ಲ'' ಎಂಬ ಗಾದೆಯನ್ನು ಉಪಯೋಗಿಸಿಕೊಂಡು ನೀವು ಏನು ಮಾಡಿದರೂ ಮಾಫಿ ಈ ಮನೆಯಲ್ಲಿ ಅಂತ ವ್ಯಂಗ್ಯವಾಗಿ ಸೂಚಿಸಿಯೂ ಆಯಿತು.

ಈ ರೀತಿ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ವ್ಯಂಗ್ಯವಾಗಿ ಹಾಸ್ಯ ಮಾಡಬಹುದು.

ಥೇಟ್ ಧನವಂತ್ರಿ ನಮ್ಮ ಡಾಕ್ಟರು. ಭೀಮನಗರದ ಜಮೀನ್ದಾರರಿಗೆ ಔಷಧಿ ಕೊಟ್ಟೋರು. ಅಂದಾಗ ಜಮೀನ್ದಾರನ ಧನ ಡಾಕ್ಟರಿಗೆ ಹೋಯಿತು ಅಂದ ಹಾಗೂ ಆಯಿತು. ಆ ಡಾಕ್ಟರು ಧನ್ವಂತ್ರಿಯಂತೆ ಪ್ರಸಿದ್ಧ ವೈದ್ಯ ಅಂದ ಹಾಗೂ ಆಯಿತು. ಈ ದ್ವಂದ್ವಾರ್ಥವೇ ವ್ಯಂಗ್ಯದ ಅಥವಾ ಕಟಕಿಯ ಹೆಗ್ಗುರುತು.

ಶಾಲಾ ಮಾಸ್ತರು ದಡ್ಡ ಹುಡುಗನನ್ನು ''ಬಾರೋ! ಬೃಹಸ್ಪತಿ'' ಎಂದು ಕರೆಯುವುದೂ; ವೈಶ್ಯ ಮುಖಂಡರು ಸಾರ್ವಜನಿಕ ಚಂದಾ ಎತ್ತಲು ಹೋದಾಗ ''ಏನು ಶೆಟ್ಟರೆ! ನೀವು ಬಂದಿರಾ ತಿರುಪಕ್ಕೆ'' ಎಂದನ್ನುವುದೂ, ಬರೀ ಸುಳ್ಳು ಸಾಕ್ಷಿ ಹೇಳಿಕೊಂಡೇ ಜೀವನ ಮಾಡುವ ಪೂಟ್ ಲಾಯರಿಯ ಅನುಯಾಯಿಯನ್ನೂ ''ಹರಿಶ್ಚಂದ್ರ! ನಿನ್ನ ಈ ದಿನದ ಸಾಕ್ಷಿ ಏನಯ್ಯಾ!'' ಎಂದು ಎದುರಾಳಿ ಲಾಯರು ಕೇಳುವುದೂ, ಹೊರವಾದ ಎಮ್ಮೆಯನ್ನು ಹೊಡೆದುಕೊಂಡು ಬರುತ್ತಿರುವ ಹೊರವಾದ ಹೆಂಗಸನ್ನು ನೋಡಿ ''ಓಹೋ! ಪೂತನಿ ಮಗಳು ಕಣೋ ಇವಳು'' ಎಂದನ್ನುವುದೂ, ವ್ಯಂಗ್ಯಕ್ಕೆ ಉದಾಹರಣೆಗಳು ನಮ್ಮ ಜನ ಜೀವನದಲ್ಲಿ ಇವೆಲ್ಲಾ ಬಹುವಾಗಿ ಉಪಯೋಗಿಸಲ್ಪಡುತ್ತಿರುವ ಕಾವ್ಯಾಲಂಕಾರವೇ ಅಲ್ಲವೇ!

ಶಾಲೆಯ ಕಲ್ಲು ಕಟ್ಟಡದ ಮೇಲೆ ಇದ್ದಿಲಿನಲ್ಲಿ ತನ್ನ ಮಾಸ್ತರುಗಳ ಮೇಲೆ ಆಶಾಗೀತಗಳನ್ನು ರಸವತ್ತಾಗಿ ಬರೆಯುತ್ತಿರುವ ಬಾಲಕನನ್ನೂ ಸ್ನೇಹಿತರೆಲ್ಲಾ ''ಅಶೋಕ'' ಎಂದೇ ಕರೆಯುತ್ತಾರೆ. ಅಶೋಕ ಚಕ್ರವರ್ತಿ ಅಹಿಂಸೆಯ ಜಾಹೀರಾತನ್ನ ಕಲ್ಲುಗಳ ಮೇಲೆಲ್ಲಾ ಕೆತ್ತಿಸಿ ಧರ್ಮ ಸಾಮ್ರಾಜ್ಯ ಸ್ಥಾಪಿಸಿದ ಅನ್ನುವ ಅರ್ಥದಷ್ಟೇ ಪ್ರಾಧಾನ್ಯವಾಗಿ ಈ ಬಾಲಕನ ಕುಚೇಷ್ಟೆಯೂ ಕಾಣಬರುತ್ತದೆ.

ನಿಂದಾ ಸ್ತುತಿಗಳು ಈ ರೀತಿ ವ್ಯಂಗ್ಯಾರ್ಥವು ಬರುವಂತೆ ಬಲು ಸೊಗಸಾಗಿ ಬರೆಯಲ್ಪಟ್ಟಿದೆ.

''ನೀನ್ಯಾಕೋ ನಿನ ಹಂಗ್ಯಾಕೋ
ನಿನ ನಾಮದ ಬಲವೊಂದಿದ್ದರೆ ಸಾಕೋ...''

ವಿಶ್ವಕಪ್ 99 ಮತ್ತು ನಂಅಜ್ಜಿ

– ಬಿ.ಎಸ್. ಪ್ರಭಾಕರ್

ವಿಶ್ವಕಪ್ 99 ಕ್ರಿಕೆಟ್ ಸರಣಿಯ ಅಂಗವಾಗಿ ಭಾರತ ಮತ್ತು ಶ್ರೀಲಂಕಾದ ಸೆಣಸಾಟ ಆಗತಾನೆ ಶುರು ಆಗಿತ್ತು.

ನಮ್ಮ ವಠಾರದಲ್ಲಿ ಕಲರ್ ಟಿ.ವಿ. ಇದ್ದುದು ನಮ್ಮ ಮನೆ ಒಂದರಲ್ಲೆ. ಇದರಿಂದಾಗಿ ವಠಾರದ ಕ್ರಿಕೆಟ್ ಪ್ರೇಮಿ ಯುವಕರು, ಖುದ್ದಾಗಿ ಇಂಗ್ಲೆಂಡಿಗೆ ಹೋಗಿ, ಟಿಕೆಟ್ ಕೊಂಡು ಸ್ಟೇಡಿಯಂ ನಲ್ಲೇ ಕೂತಷ್ಟು, ಉತ್ಸಾಹದಿಂದ, ನಂ ಟಿವಿ ಮುಂದೆ ಸಾಕಷ್ಟು ಸಂಖ್ಯೆಯಲ್ಲಿ ಜಮಾಯಿಸಿಬಿಟ್ಟಿದ್ದರು.

ಆ ದಿನ ನನ್ನ ತಂದೆ ತಾಯಿ ಮನೆಯಲ್ಲಿ ಇಲ್ಲದಿದ್ದುದು ನಮಗೆಲ್ಲಾ ಮನಬಂದಂತೆ ಕೂಗಾಡಿ, ಗದ್ದಲ ಮಾಡುವ ಅವಕಾಶ ಸಿಕ್ಕಿದ್ದು, ಕೋತಿಗಳಿಗೆ ಹೆಂಡ ಕುಡಿಸಿದಂತಾಗಿತ್ತು.

ನನ್ನ ಅಜ್ಜಿಯೇನೋ ಮನೆಯಲ್ಲೇ ಇದ್ದರು. ಆದರೆ ಅವರನ್ನು ಕಂಡರೆ ನನಗೆ ಒಂದು ಚೂರೂ ಭಯವಿರಲಿಲ್ಲ. ಸಚಿನ್, ಜಗತ್ತಿನ ಎಲ್ಲ ಬೌಲರನ್ನು ಲೀಲಾಜಾಲವಾಗಿ ಎದುರಿಸುವಂತೆ ನಂ ಅಜ್ಜಿಯನ್ನು ಎದುರಿಸುವ ಎದೆಗಾರಿಕೆ ನನಗಿತ್ತು.

ದ್ರಾವಿಡ್ ಮತ್ತು ಗಂಗೂಲಿ ಅವರ ಬಿರುಸಿನ ಹೊಡೆತಗಳು ಆಕರ್ಷಕವಾಗಿತ್ತು. ಅವರು ಬಾರಿಸುತ್ತಿದ್ದ ಪ್ರತಿ ಬೌಂಡ್ರಿ ಅಥವಾ ಸಿಕ್ಸರ್‌ಗಳಿಗೂ, ನಾವೆಲ್ಲಾ ಹುಚ್ಚೆದ್ದು ಯದ್ವಾತದ್ವಾ ಕೂಗಾಡತೊಡಗಿದೆವು.

ನಮ್ಮ ಗಲಾಟೆಯಿಂದ ಹಾಯಾಗಿ ನಿದ್ದೆ ಮಾಡುತ್ತಿದ್ದ ನಂ ಅಜ್ಜಿಗೆ ಬೆನ್ನಮೇಲೆ ಅವರೆಕಾಯಿ ಹುಳು ಹರಿದಂತಾಯಿತೋ ಏನೋ, ತಟ್ಟನೆದ್ದು ರೂಮಿನಿಂದ ಆಚೆಗೆ ಬಂದು ''ಅಬಬ... ತಲೆ ಚಿಟ್ ಹಿಡಿಸ್ತಾ ಇದೀರ. ಶನಿ ಮುಂಡೇವ, ಪಾಪಿಷ್ಟ ಮುಂಡೇವ. ಈ ಪಾಟಿ ಅರ್‍ಕೊಳ್ಳೋಕೆ ನಾಚ್ಕೆ ಆಗೊಲ್ವಾ? ಅಲ್ಲೇನ್ ಕೋತಿ ಕುಣೀತಾ ಇದ್ಯಾ? ಒಬ್ಬೊಬ್ರೂ ಒಂದೊಂದು ಮರ ಅನ್ನ ತಿನ್ನೋಷ್ಟು ಬೆಳ್ದಿದೀರಿ? ಹೇಳೋರ್ ಕೇಳೋರ್ ಯಾರೂ ಇಲ್ವಾ ನಿಮ್ಗೆ? ಬಾಯ್ ಮುಚ್ಕೊಂಡ್ ಗಂಭೀರ್ವಾಗಿ ನೋಡೋಕೆ ಏನ್ ಕೇಡ್ ನಿಮ್ಗೆ? ಒಂದರಘಳ್ಗೆ ಹಾಯಾಗಿ ಬಿದ್ಕೊಳ್ಳೋಕೂ ಆಗಲ್ಲ ಈ ಸುಡ್ಗಾಡ್ ಟಿವಿಯಿಂದ. ಏನ್ ಕರ್ಮಾನೋ ಇಂತಾ ಪ್ರಾರಬ್ಧ ಮಕ್ಳನ್ನ ಕಟ್ಕೊಂಡು'' ಅಂತ, ಶ್ರೀನಾಥ್‌ತರ ಬೌಲಿಂಗ್ ಮಾಡಿ, ನಮ್ಮನ್ನೆಲ್ಲಾ ಸರಾಸಗಟಾಗಿ ಬೋಲ್ಡ್ ಮಾಡಿಬಿಟ್ಟರು.

ಅಜ್ಜಿಯ ಆರ್ಭಟ ಕೇಳಿದ ನನ್ನ ಗೆಳೆಯರು, ಸ್ವತಃ ತಾವೇ ಕುಂಬ್ಳೆ ಬೌಲಿಂಗ್ ಎದುರಿಸುತ್ತಿದ್ದೇವೆ ಎನ್ನುವಷ್ಟು ಒಂದು ಕ್ಷಣ ಬೆದರಿ, ಬೆವತು ಮೌನಿಗಳಾಗಿ ಕೂತುಬಿಟ್ಟರು.

ನಂಗೆ ಅಜ್ಜಿಯ ಮೇಲೆ ಸಿಟ್ಟು ಬಂತು. ''ಅಜ್ಜೀ ನೀ ಹೀಗೆಲ್ಲಾ ರೇಗಾಡಿದ್ರೆ, ನಾಳೆಯಿಂದ ಮರಹತ್ತಿ ಬುಟ್‌ಬುಟ್ಟಿ ಸಂಪ್ಗೆ ಹೂ ಕಿತ್ಕೊಡಲ್ಲ. ಆಮೇಲೆ ದೇವ್ರಪೂಜೆಗೆ ನಿಂಗೆ ಹೂವೇ ಇರಲ್ಲ ನೋಡು. ಅಷ್ಟೇ ಅಲ್ಲ ನಿನ್ನ ಇನ್ಮೇಲೆ ಕಣ್ಣಾಸ್ಪತ್ರೆಗೂ ಕರ್ಕೊಂಡೋಗಲ್ಲ. ಅದೇನ್ ಮಾಡ್ಕೋ ಮಾಡ್ಕೋ ಹೋಗು'' ಅಂತ ದ್ರಾವಿಡ್ ಸಿಕ್ಸರ್ ಬಾರಿಸುವಂತೆ, ಹಿಂದೂ ಮುಂದೂ ನೋಡದೆ ದಬಾಯಿಸಿಬಿಟ್ಟೆ.

ನಂ ಅಜ್ಜಿ ಹಿಟ್ ವಿಕೇಟ್ ಮಾಡಿಕೊಂಡ ಬ್ಯಾಟ್‌ಮನ್ ತರ ಬೆಪ್ಪಾಗಿ ಕ್ಷಣಕಾಲ ನಿಂತು ಬಿಟ್ಟರು. ಅವರ ಕೋಪ ತಣ್ಣಗಾಯಿತು. ''ಏ ಹೋಗೋ ಮಗು ಒಂಚೂರೂ ತಾಳ್ಮೆ ಇಲ್ಲ ನಿಂಗೆ. 'ಮೂಗಿನ್ ಕೆಳ್ಗೆ ಬಾಯಿ' ಅಂದ್ರೆ ಸಾಕು ಕೋಪ ಮಾಡ್ಕೋತಿ. ಅಲ್ ಕಣ್ ಮಗು, ನೀನೇ ಹೇಳು ಅಂತೋದು ಏನಿದೆ ಈ ಆಟ್ದಲ್ಲಿ. ಅವ್ರು ಆಡ್ತಿರೋ ಚೆಂಡೋ, ನೋಡಿದ್ರೆ ಬೇಜಾರಾಗುತ್ತೆ. ಥೇಟ್ ನಿಂತಾತನ ಪಿಂಡ ಇದ್ದಾಗೆ ಇದೆ. ನಂಕಾಲ್ದ ಮದ್ವೇಗಳಲ್ಲಿ ಉರುಟ್ನೆಶಾಸ್ತ್ರ ಅಂತ ಮಾಡ್ತೋರು. ಗಂಡು ಹೆಣ್ಣು ಎದ್ರು ಬದ್ರು ಕೂತ್ಕೊಂಡು, ಹೂವಿನ್ ಚೆಂಡಿಂದ, ಹಾಡೇಳ್ಕೊಂಡು ಆಟ ಆಡೋರು, ಅದೇ ಎಷ್ಟೋ ತಮಾಷೆಯಾಗಿರೋದು. ಇದ್ರಲ್ಲೇನಿದೆ ಮಣ್ಣು, ಒಂದು ಹಾಡಿಲ್ಲ, ಒಂದು ಹಸೆ ಇಲ್ಲ'' ಅಂತ ಅಧಃಕರಿಸಿಬಿಟ್ಟರು.

ಅಜ್ಜಿ ಕೊಟ್ಟ ವಿವರಣೆಯಿಂದ ನಮಗೆಲ್ಲಾ ಕಚಗುಳಿ ಕೊಟ್ಟಂತಾಯಿತು. ನಾನು ಅಜ್ಜಿಗೆ ''ಅಜ್ಜೀ ಈ ಆಟ ಏನು? ಹ್ಯಾಗಾಡೋದು? ಅಂತ ನಿಂಗೆ ಗೊತ್ತಿದ್ದಿದ್ರೆ, 'ನನ್ನ ಇಂಗ್ಲೇಂಡ್ಗೆ ಕರ್ಕೊಂಡೋಗೋ' ಅಂತ ನಂ ಅಪ್ಪನ್ನ ನೀನು ಪೀಡಿಸ್ತಿದ್ದೆ. ಅಷ್ಟೆ ಅಲ್ಲ ಈಗ ನಂಜೊತೆ ನೀನೂ ಕೂತ್ಕೊಂಡು, ನಂತರಾನೇ ಎದ್ದೆದ್ದು, ಬಿದ್‌ಬಿದ್ದು ಸಿಳ್ಳೆ ಹಾಕೊಂಡು ಕೂಗಾಡ್ತಾ ಇರ್ತಿದ್ದೆ. ಅಜ್ಜೀ ನಂ ಊರ್ನೋರು, ಶ್ರೀಲಂಕಾದೋರ್ನ, ಬೊಂಬಾಟಾಗಿ ಚೆಚ್ತಾ ಇದಾರೆ. ಆಟ ತುಂಬಾ ಸಕತ್ತಾಗಿದೆ. ನೀನೂ ಕೂತ್ಕೊಂಡು ನೋಡ್ತಾ ಅಜ್ಜಿ. ನಿಂಗೆ ಅರ್ಥ ಆಗೋ ಹಾಗೆ ಕನ್ನಡ್ದಲ್ಲಿ ಹೇಳ್ತೀನಿ'' ಅಂತ ಆಹ್ವಾನಿಸಿದೆ.

ಅಜ್ಜಿ ಕ್ಷಣಕಾಲ ಟಿವಿ ಕಡೆಗೆ ದೃಷ್ಟಿಸಿ, ಆನಂತರ ''ನೀ ಏನೇ ಹೇಳು ಈ ಆಟ ಮಾತ್ರ ಧರ್ಮಕ್ಕೆ ವಿರುಧ್ವಾದ್ದು. ಇಂತಾ ಆಟ ನೋಡೋದು ಮಹಾ ಪಾಪ'' ಅಂತ ಅಂದರು.

''ಯಾಕಜ್ಜಿ?'' ಕೇಳಿದೆ ನಾನು.

''ಮತ್ತಿನ್ನೇನೋ? ಶ್ರಿಲಂಕಾ ಅಂದ್ರೇ, ಅದೇ ರಾವಣ, ಇಂದ್ರಜಿತ್, ಕುಂಭಕರ್ಣ ಅನ್ನೋ ರಾಕ್ಷಸ್ರು ಇದ್ರಲ್ಲ ಆದೇಶ ಅಲ್ವೇ ಆ ದೇಶ್ದೋರು ಸೀತಾ

ದೇವಿಗೆ ಎಷ್ಟೊಂದು ತೊಂದ್ರೆ ಕೊಟ್ರು ಏನ್ಕತೆ. ಹೋಗಿ ಹೋಗಿ ಅಂತೋರ್ಜತೆ ಆಟಾನಾ? ಬೇರೆ ಯಾರೂ ಸಿಕ್ದೇ ಇದ್ರೆ, ನಿಂಜೊತೇಲಿ ಆಡ್ಬೌದಾಗಿತ್ತಲ್ಲ?'' ಅಂತ ನಿಷ್ಠುರ ಮಾಡಿದರು.

''ಅಜ್ಜೀ ಈಗ ಕಲಿಯುಗ. ರಾಮಾಯ್ಣ ನಡ್ದಿದ್ದು ತ್ರೇತಾಯುಗ್ದಲ್ಲಿ. ರಾವಣನ ವಂಶಕ್ಕೆ ಸೇರ್ದ ಒಂದೇ ಒಂದು ಗುಳ್ಳೆನರಿ ಕೂಡ ಈಗಿಲ್ಲ ಅಲ್ಲಿ. ಈಗ ಅಲ್ಲಿರೋರೆಲ್ಲಾ ನಾನು, ನೀನು ಇದೀವಲ್ಲ ಹಾಗೆ ಶಾನ್‌ಶಾನೆ ಒಳ್ಳೇರು, ಗೊತ್ತಾ ಅಜ್ಜಿ?''

''ಹೌದೇನೋ ಮಗು? ಹಾಗಿದ್ರೇ ಮರಾಯ್ನಾಗಿ ಆಡ್ಲಿ ಬಿಡು, ನಂ ಅಪ್ಪನ ಗಂಟೇನು ಹೋಗಲ್ವಲ್ಲ. ಮಗು, 'ಇಷ್ಟು ರನ್ ಆಯ್ತು, ಅಷ್ಟು ರನ್' ಆಯ್ತು ಅಂತ್ಯಲ್ಲ ಹಾಗಂದ್ರೇನೋ?''

''ಅದೇ ಅಜ್ಜಿ, ನೀನು ಚಿಕ್ಕೋಳಾಗಿದ್ದಾಗ ಕುಂಟೋ ಬಿಲ್ಲೆ, ಹರಳುಗುಣಿ ಆಟ ಆಡೋವಾಗ 'ಗೀಚಿ' ಅಂತಿದ್ರಲ್ಲ, ಇದೂನೂ ಆತರದ್ದೆ. ಒಂದು ರನ್ ಅಂದ್ರೇ ಒಂದು ಗೀಚಿ ಅಂತ ಅರ್ಥ.''

''ಹಾಗೇ ಕ್ಯಾಚ್ ಅಂದ್ರೇನು ಹೇಳ್ತೀಯಾ ಮಗು?'' ಕೇಳಿದರು ಅಜ್ಜಿ.

''ಅಜ್ಜೀ ಕವ್ಡೇನ ಮೇಲಕ್ಕೆ ಎಸ್ದು, ನೆಲಕ್ಕೆ ಬೀಳಿಸ್ದೆ ಹಿಡ್ಕೊಂಡು ಆಡೋ ಆಟ. ಹೊಡ್ದೋನು ಔಟಾಗ್ತಾನೆ. ಆದ್ರೆ ಕವ್ಡೆ ಆಟ್ದಲ್ಲಿ ಕವ್ಡೇನ ನೆಲಕ್ಕ ಬೀಳ್ಸಿದ್ರೆ ಔಟಲ್ವಾ? ಇದೇ ರೀತಿ ಗಣೇಶ ರಾವಣ ಕೊಟ್ಟ ಶಿವನ ಆತ್ಮಲಿಂಗಾನ ನೆಲದ ಮೇಲೆ ಇಟ್ಟು ರಾವಣಂಗೆ ಕೈ ಕೊಟ್ಟ. ಆ ಕಥೆ ನಿಂಗೆ ಗೊತ್ತಿರ್ಬೇಕಲ್ವಾ?''

ಅಜ್ಜಿಯ ಮುಖದ ಮೇಲೆ ಪ್ರಸನ್ನತೆ ಮೂಡಿತು. ''ಇಷ್ಟೇನಾ ಈ ಆಟದ ಬಂಡವಾಳ? ಗೊತ್ತಾಯ್ತು. ನಾನೇನಾದ್ರೂ ಎಪ್ಪತ್ತೈದು ವರ್ಷ ಚಿಕ್ಕೋಳಾಗಿದ್ದಿದ್ರೇ ನಿಂಜೊತೇಲೆಲ್ಲಾ ಈ ಆಟ ಆಡ್ತಿದ್ದೆ'' ಅಂತ ಅಂದರು.

ಅಜ್ಜಿ ಮಾತು ಮುಗಿಯುತ್ತಿದ್ದಂತೆ, ಗಂಗೂಲಿ ಬಾರಿಸಿದ ಚೆಂಡು ಮೇಲಕ್ಕೆ ಹೋಗಿ ಕಳೆದೇ ಹೋಯಿತು. ನಾವೆಲ್ಲಾ 'ಸಿಕ್ಸರ್, ಮೈಟೀ ಸಿಕ್ಸರ್' ಅಂತ ಕೂಗಾಡಿದೆವು. ವಿಶ್ವಕಪ್ 99 ನಮ್ಮ ಜೋಬಿನಲ್ಲೇ ಇದೆ ಎನ್ನುವಷ್ಟು ಆನಂದದಲ್ಲಿ.

ಅಜ್ಜಿಗೆ ನಮ್ಮ ಕೂಗಾಟ ಅರ್ಥವಾಗಲಿಲ್ಲ ''ಯಾಕ್ರೋ ಮಕ್ಳ, ಏನಾಯ್ತ್ರೋ?'' ಅಂತ ಪ್ರಶ್ನಿಸಿದರು.

''ಅಜ್ಜೀ, ಗಂಗೂಲಿ ಹೊಡ್ದ ಬಾಲು, ಆಕಾಶಕ್ಕೆ ಹೋಗಿ ಮಂಗ ಮಾಯ ಆಗೋಯ್ತು'' ಅಂತ ನನ್ನ ಸ್ನೇಹಿತ, ಸ್ವತಃ ಡೊನಾಲ್ಡ್ ಬೌಲಿಂಗಿಗೆ ಭಾರಿ ಸಿಕ್ಸರ್ ಹೊಡೆದಷ್ಟು ಖುಷಿಯಿಂದ ಅಜ್ಜಿಗೆ ಹೇಳಿದ.

ಅಜ್ಜಿ ಹಿಂಗೈಯನ್ನು ಗಲ್ಲದ ಮೇಲೆ ಇಟ್ಟುಕೊಂಡು ಆಶ್ಚರ್ಯದಿಂದ ''ಎಲಾ ಇವ್ನ! ಇವ್ನೇ ಅಷ್ಟು ಜೋರಾಗಿ ಹೊಡ್ದ ಅಂದ್ರೆ, ಇನ್ನು ಭೀಮಸೇನ ಏನಾದ್ರೂ ಹೊಡ್ದಿದ್ದಿದ್ರೆ, ಸೀದಾ ವೈಕುಂಠಕ್ಕೆ ಹೋಗಿ ಬೀಳ್ತಿತ್ತೋ ಏನೋ? ಅಲ್ವೇ ಮಕ್ಳ?

ಪಾಂಡವ್ರು ಪಗ್ಡೆ ಆಟ್ದ ಬದ್ಲು, ಈ ತರ್ದ ಆಟ ಆಡಿದ್ದಿದ್ರೇ ಪಾಪ ಸೋಲ್ತಿರ್ಲಿಲ್ಲ ಅಲ್ವೇನೋ?'' ಅಂತ ಸೂಚಿಸಿದರು.

ಅಜ್ಜಿಯ ಸಲಹೆಗೆ ನಮ್ಮ ವಠಾರದ ಏಕೈಕ ಬ್ಯಾಟ್ ಅಂಟ್ ಬಾಲ್ ಓನರ್ ನಾಣಿ ಎದ್ದು ನಿಂತು, 'ಅಜ್ಜೀ ಅವಾಗ್ಲೂ ಪಾಂಡವ್ರೇ ಸೋಲ್ತಿದ್ರು. ಹ್ಯಾಗಂದ್ರೆ ಶಕುನಿ ಬಾಲ್ಗೆ ಮಂತ್ರ ಹಾಕಿ, ಹಂದೆಗ್ಣ ಹ್ಯಾಗೆ ಏಟ್ಗೆ ಸಿಕ್ದೀರ ಓಡೋಗುತ್ತೋ ಹಾಗೆ, ಬಾಲು ಬ್ಯಾಟ್ಗೆ ಸಿಕ್ದೆ ಭೀಮನ್ನ ಬೋಲ್ಡ್ ಮಾಡ್ತೋನು. ಅಥ್ವಾ ಫುಲ್ ಟಾಸ್ ಬಾಲೂ ನೈಂಟಿ ಡಿಗ್ರೀಸ್ ಟರ್ನ್ ಆಗಿ ಭೀಮ ಬೋಲ್ಡ್ ಆಗೋಹಾಗೆ ಶಕುನಿ ಪ್ಲಾನ್ ಮಾಡೋನು'' ಅಂತ ತನ್ನ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದ.

ನಾಣಿಯ ವಿವರಣೆ ಅಜ್ಜಿಗೆ ಒಂದಿಷ್ಟೂ ಅರ್ಥ ಆಗಲಿಲ್ಲ. ''ಮಕ್ಳ ನಂಗೆ ಖಂಡ್ಗ ಕೆಲ್ಸ ಇದೆ, ನಿಂಜೊತೆ ಕೂತ್ಕೊಂಡು ಕಾಕಮ್ಮ ಪುರಾಣ ಒಂದ್ರೋಕೆ ನಂಕೈಲಿ ಆಗಲ್ಲ'' ಅಂತ ಹೇಳಿ ಅಡಿಗೆ ಮನೆಗೆ ಹೊರಟು ಹೋದರು.

ಹಲವಾರು ಓವರ್‌ಗಳ ನಂತರ ಭಾರತದ ಆಟದವರು ಭಾರಿ ಮೊತ್ತದ ಸ್ಕೋರ್ ಪೇರಿಸಿ, ಪೆವಿಲಿಯನ್ ಕಡೆಗೆ ಹೆಚ್ಚಿನ ಆತ್ಮ ವಿಶ್ವಾಸದಿಂದ ಹಿಂತಿರುಗಿದರು, ಫೈನಲ್ಸ್‌ನಲ್ಲಿ ನಮ್ಮನ್ನು ಎದುರಿಸುವವರು ಯಾರಿದ್ದಾರೆ ಎನ್ನುವ ಠೀವಿಯಲ್ಲಿ.

★★★

ಶ್ರೀಲಂಕಾದವರ ಬ್ಯಾಟಿಂಗ್ ಶುರು ಆಯಿತು. ಅದರೊಂದಿಗೆ ನಮ್ಮ ಕಿರುಚಾಟವು ಶುರು ಆಯಿತು. ಈ ಸಾರಿ ಅಜ್ಜಿಗೆ ಮ್ಯಾಚ್ ನೋಡುವುದಕ್ಕೆ ಇಷ್ಟವಾಗಲಿಲ್ಲ. ಅಡಿಗೆ ಮನೆ ಬಿಟ್ಟು ಈಚೆಗೆ ಬರಲೇ ಇಲ್ಲ.

ಶ್ರೀ ಲಂಕಾದ ಬ್ಯಾಟ್ಸ್‌ಮನ್‌ಗಳು ಒಬ್ಬೊಬ್ಬರಾಗಿ ಔಟಾಗತೊಡಗಿದಾಗ ನಮ್ಮ ಗಲಾಟೆ ಮತ್ತಷ್ಟು ಜೋರಾಯಿತು. ಅಟ್ಟಪಟ್ಟು ಔಟಾದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ''ಅಜ್ಜೀ ಅಟ್ಟಪಟ್ಟೂ ಔಟ್ ಆದ'' ಅಂತ ಕೂಗುತ್ತಾ ಅಡಿಗೆ ಮನೆಗೆ ಧಾವಿಸಿದೆ. ಅಡಿಗೆಮನೆಯಲ್ಲಿ ಅಜ್ಜಿ ದೇವರ ಮುಂದೆ ಕೂತು ಜಪ ಮಾಡುತ್ತಿದ್ದರು. ನನ್ನ ಕಡೆಗೆ ನೋಡಿಯೂ ನೋಡದಂತೆ ನಟಿಸಿ, ''ಅಟ್ಟಪಟ್ಟು ಔಟಾದ್ರೇನು ನಿಪ್ಪಟ್ಟು ಔಟಾದ್ರೇನು ನಂಗೇನಂತೆ, ನಾ ಧ್ಯಾನ ಮಾಡೋವಾಗ ನನ್ನ ಮಾತಾಡಿಸ್ಬೇಡ ಅಂತ, ಎಷ್ಟು ಸಾರಿ ಹೇಳೋದು'' ಅಂತ ಗದರಿಸಿಬಿಟ್ಟರು. ನಾನು ಫಸ್ಟ್ ಬಾಲ್ಗೇ ಔಟಾದ ಬ್ಯಾಟ್ಸ್‌ಮನ್ ತರ ಬೇಜಾರಿನಿಂದ ಆಚೆಗೆ ನಡೆದೆ.

ಶ್ರೀಲಂಕಾದೋರೆಲ್ಲಾ ಔಟಾಗಿ ಭಾರತ ಗೆದ್ದಿತು ಅಂತ ತಿಳಿದ ಕೂಡಲೇ ಅಜ್ಜಿ ತಾವಾಗೇ ಈಚೆಗೆ ಬಂದು ''ಮಕ್ಳ ಭಾರತ ಗೆತ್ತು, ಅಲ್ವೇ? ಬೋ ಸಂತೋಷ, ಬೋ ಸಂತೋಷ. ನಾಳೆ ಹೇಗೂ ಗುರುವಾರ, ರಾಯ್ರ ಪೂಜೆ ಮಾಡಿ, ಸೀ ಸಜ್ಗೆ ನೈವೇದ್ಯಮಾಡಿ ನಿಮ್ಗೆಲ್ಲಾ ಕೊಡ್ತೀನಿ, ತಪ್ದೆ ಬನ್ನಿ ಎಲ್ಲ'' ಅಂತ ಆಹ್ವಾನ ನೀಡಿದರು.

ಭಾರತ ಗೆದ್ದಿದ್ದು ನಮ್ಗೆಲ್ಲಾ ಆಗಲೇ ಸಿಹಿ ತಿಂದಷ್ಟು ಸಮತೋಷವಾಗಿತ್ತು.

ಪುಸ್ತಕ ಪರಿಚಯ

– ಲೀಲಾಶೇಖರ್

ಹೆಂಡತಿಯನ್ನು ಪ್ರೀತಿಸಿದರೆ (ಹಾಸ್ಯ ಲೇಖನಗಳ ಸಂಕಲನ)
ಲೇ: ಸೂರಿ ಹಾರ್ದಳ್ಳಿ

ಇತ್ತೀಚಿನ ಹಾಸ್ಯ ಬರಹಗಾರರಲ್ಲಿ ಹೆಚ್ಚಾಗಿ ಕೇಳಿ ಬರುತ್ತಿರುವ ಹೆಸರು 'ಹಾರ್ದಳ್ಳಿ ಸೂರಿ' ಈ ಬಾರಿ ಗೋರೂರು ಪ್ರತಿಷ್ಠಾನದ ಪ್ರಶಸ್ತಿ ಪಡೆದ 'ಹೆಂಡತಿಯನ್ನು ಪ್ರೀತಿಸಿದರೆ'... ಒಂದು ಸರಸಮಯ ವಿನೋದ ಸಂಕಲನ... ಈ ಸಂಕಲನದಲ್ಲಿ ಇಪ್ಪತ್ತೇಳು ಪ್ರಸಂಗಗಳಿವೆ. ಒಂದೊಂದು ಒಂದೊಂದು ರೀತಿಯಲ್ಲಿ ಓದುಗರನ್ನು ರಂಜಿಸಬಲ್ಲುದು - ಸೂರಿಯವರ ಶೈಲಿಯಲ್ಲಿ ಲವಲವಿಕೆ, ನೈಜ, ನೇರ ನಿರೂಪಣೆ, ರಸಿಕತೆಯಿಂದ ಕೂಡಿದ ಸಂಭಾಷಣೆ, ಚಿಕ್ಕ ಚಿಕ್ಕ ಘಟನೆಗಳಿಗೆ ಹಾಸ್ಯಲೇಖನ ಮಾಡಿ ಬಡಿಸುವ ಜಾಣ್ಮೆ ಇದೆ. ಹರಟೆಯೋಪಾದಿಯಲ್ಲಿ ಸಾಗುವ ಇವರ ಲೇಖನಗಳಲ್ಲಿ ಸ್ವಾರಸ್ಯಪೂರ್ಣ ಅಂಶಗಳಿವೆ. ಹಾಸ್ಯವನ್ನು ಉಕ್ಕಿಸುವ ಟೆಕ್‌ನಿಕ್ ಸೂರಿಯವರಲ್ಲಿದೆ - ಸರಳ ನಿರೂಪಣೆ, ಕಥೆ ಹೇಳುವ ರೀತಿಯಲ್ಲಿ ನವೀನತೆಯಿದೆ - ಮುನ್ನುಡಿಯಲ್ಲಿ ಶ್ರೀ ಅ.ರಾ. ಮಿತ್ರರವರು ಹೇಳಿರುವಂತೆ ವೈವಿಧ್ಯಮಯವಾದ ಜೀವನದ ಎಲ್ಲಾ ರಂಗಗಳಲ್ಲೂ ಸೂರಿಯವರು ಲೀಲಾಜಾಲವಾಗಿ ಪಾತ್ರ ಕಟ್ಟಬಲ್ಲ ಸಾಮರ್ಥ್ಯ ಪಡೆಯುತ್ತಿದ್ದಾರೆ.

'ಹೆಂಡತಿಯನ್ನು ಪ್ರೀತಿಸಿದರೆ' ಎಂಬುವ ಲೇಖನದಲ್ಲಿ ಇದ್ದಕ್ಕಿದ್ದಂತೆ ಅತಿಯಾಗಿ ಹೆಂಡತಿಗೆ ಪ್ರೀತಿ ತೋರಿಸಿದಾಗ ಆಗುವ ಪರಿಣಾಮದ ಬಗ್ಗೆ ರಮ್ಯ ಸಂಗತಿ ಇದ್ದರೆ, ನಗರ ಸಾರಿಗೆ ಬಸ್ಸಿನ ಪ್ರಯಾಣದಿಂದಾಗುವ ಪರಿಣಾಮ, 'ನಗರ ಸಾರಿಗೆ ಮತ್ತು ಯೋಗ' ದಲ್ಲಿದೆ. ಡಾಕ್ಟರಿಗೆ ನಮಿಸಿ, 'ವೈದ್ಯೋ ನಾರಾಯಣ' ಲೇಖನದಲ್ಲಿ ಡಾಕ್ಟರ್ ಬಳಿ ಹೋದಾಗ ನಡೆಯುವ ವಿಚಿತ್ರ ಪ್ರಸಂಗಗಳ ಚಿತ್ರಣ ವಿದೆ. ಇಲ್ಲಿಯ ಬರಹಗಳೆಲ್ಲಾ ತಿಳಿಹಾಸ್ಯದ ಗುಳಿಗೆಗಳು. ಆನಂದೋಪಖ್ಯಾನ, ಮದುವೆ ಮತ್ತು ಇಸ್ಪೀಟು ಶುದ್ಧ ಹರಟೆಗಳಾದರೆ ನೀರೆಗೊಂದು ಸೀರೆ, ಸಮಾನರು, ದಕ್ಷಿಣೋತ್ತರರು ನಿದ್ದೆಯ ಕತೆ ಕಥಾನಕಗಳಾಗಿವೆ - ಸೂರಿಯವರಿಗೆ ಹಾಸ್ಯ ಲೇಖನಗಳನ್ನು ಬರೆಯುವ ಶೈಲಿ ಕರಗತವಾಗಿದೆ. ಸರಾಗವಾಗಿ ಸಾರಿ ಹೋಗುವ ಇವರ ಲೇಖನಿಯಿಂದ ಇನ್ನು ಹತ್ತಾರು ಸಂಕಲನಗಳು ಹೊರ ಬಂದು ಕನ್ನಡ ಹಾಸ್ಯ ತೋಟದಲ್ಲಿ ಮಲ್ಲಿಗೆಯಂತೆ ಪರಿಮಳಿಸಿ ಹಾಸ್ಯ ತೋಟದ ಬೆಳೆ ಹುಲುಸಾಗಿ ಬೆಳೆದು ಹಾಸ್ಯಪ್ರಿಯರನ್ನು ರಂಜಿಸಲಿ ಎಂದು ಹಾರೈಸುತ್ತೇನೆ.



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕಡಾಂಬಿ.

ಮೋಹಕ, ಸುಂದರ ಹಾಗೂ ಆಕರ್ಷಣೀಯ ಸ್ವರ್ಣ ಕ್ವಾರ್ಟ್ಜ್ ಗಡಿಯಾರಗಳು ಎಚ್‌ಎಮ್‌ಟಿಯವರಿಂದ. ಕಂಗೊಳಿಸುವ ಗೋಲ್ಡ್ ಪ್ಲೇಟೆಡ್‌ನೊಂದಿಗೆ. ನಿಮಗಾಗಿ ಕೇವಲ ರೂ. 555/- ಕ್ಕೆ!

ಇದಲ್ಲದೆ, ಎಚ್‌ಎಮ್‌ಟಿಯ ಬೃಹತ್ ಶ್ರೇಣಿಯಲ್ಲಿ ಆಟೋಮ್ಯಾಟಿಕ್ ಹಾಗೂ ಮೆಕ್ಯಾನಿಕಲ್ ಕೈಗಡಿಯಾರಗಳು, ಎಲ್ಲರ ಕೈಗೆ ಎಟುಕುವ ಬೆಲೆಗಳಲ್ಲಿ, ವಿವಿಧ ಶೈಲಿಗಳಲ್ಲಿ ದೊರೆಯುತ್ತವೆ.

ಒಂದು ಸುಂದರ
ಗೋಲ್ಡ್ ಪ್ಲೇಟೆಡ್
ಗಡಿಯಾರ
ಕೇವಲ
ರೂ. 555/-ಕ್ಕೆ



Swarna
QUARTZ
from
hmt

ಹೆಚ್ಚಿನ ವಿವರಗಳಿಗೆ ಈ ಕೂಪನ್‌ನ್ನು ಭರ್ತಿ ಮಾಡಿ ಇವರಿಗೆ ಕಳುಹಿಸಿ.
ದಿ ಜನರಲ್ ಮಾರ್ಕೆಟಿಂಗ್ ಮ್ಯಾನೇಜರ್ (ಗಡಿಯಾರಗಳು),
ಎಚ್‌ಎಮ್‌ಟಿ ಲಿಮಿಟೆಡ್, 59, ಬಳ್ಳಾರಿ ರಸ್ತೆ, ಬೆಂಗಳೂರು-560 032
ದೂರವಾಣಿ: 3335032 ಫ್ಯಾಕ್ಸ್: 3338950

* ಗರಿಷ್ಠ ಮಾರಾಟ ಬೆಲೆ.
ಸಗಟು ಖರೀದಿಯ ಮೇಲೆ ವಿಶೇಷ ರಿಯಾಯಿತಿ

ಹೌದು, ನಾನು ಎಚ್‌ಎಮ್‌ಟಿ ಗಡಿಯಾರಗಳನ್ನು ಖರೀದಿಸಲು ಬಯಸುತ್ತೇನೆ. ದಯವಿಟ್ಟು ನಿಮ್ಮ ಸೇಲ್ಸ್ ಎಕ್ಸಿಕ್ಯೂಟಿವ್ ಅವರನ್ನು ಕಳುಹಿಸಿಕೊಡಿ.

ಹೆಸರು ____________ ವಿಳಾಸ ____________

ಸಂಸ್ಥೆ ____________ ಹುದ್ದೆ ____________ ದೂರವಾಣಿ : ____________

MASS HMT

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.
Editor : M. SHIVAKUMAR